# ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ಅಧಿನಿಯಮ, 1990

## ಪ್ರಕರಣಗಳ ಕ್ರಮಪಟ್ಟಿ

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**ಪ್ರಕರಣಗಳು:**

1.ಚಿಕ್ಕ ಹೆಸರು ಮತ್ತು ಪ್ರಾರಂಭ.

2.ಪರಿಭಾಷೆಗಳು.

3.ಅನ್ವಯ.

4.ನೇಮಕಾತಿಗಳು ಅಥವಾ ಹುದ್ದೆಗಳ ಮೀಸಲಾತಿ ಮುಂತಾದವು.

4ಎ. ಜಾತಿ ಪ್ರಮಾಣ ಪತ್ರ ಮತ್ತು ಆದಾಯ ಮತ್ತು ಜಾತಿ ಪ್ರಮಾಣ ಪತ್ರಗಳ ನೀಡಿಕೆ.

4ಬಿ. 4ಎ ಪ್ರಕರಣದ ಅಡಿಯಲ್ಲಿನ ಆದೇಶದ ವಿರುದ್ಧ ಅಪೀಲು.

4ಸಿ. ಜಾತಿ ಪ್ರಮಾಣ ಪತ್ರ ಮತ್ತು ಆದಾಯ ಮತ್ತು ಜಾತಿ ಪ್ರಮಾಣ ಪತ್ರದ ಪರಿಶೀಲನೆ.

4ಡಿ. ಅಪೀಲು.

4ಇ. ತಹಶೀಲ್ದಾರನು ಮತ್ತು ಪರಿಶೀಲನಾ ಸಮಿತಿಯು ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಚಲಾಯಿಸುವುದು

4ಎಫ್. ಡೆಪ್ಯೂಟಿ ಕಮೀಷನರ್‌ರಿಂದ ಪುನರೀಕ್ಷಣೆ

5. ದಂಡ.

5ಎ. ಸುಳ್ಳು ಜಾತಿ ಪ್ರಮಾಣ ಪತ್ರ ಅಥವಾ ಆದಾಯ ಮತ್ತು ಜಾತಿ ಪ್ರಮಾಣ ಪತ್ರ ಪಡೆದಿದ್ದಕ್ಕಾಗಿ ದಂಡಗಳು

5ಬಿ. ಸುಳ್ಳು ಜಾತಿ ಪ್ರಮಾಣ ಪತ್ರ ಅಥವಾ ಆದಾಯ ಮತ್ತು ಜಾತಿ ಪ್ರಮಾಣ ಪತ್ರ ನೀಡಿದ್ದಕ್ಕಾಗಿ ದಂಡ

6. ಅಪರಾಧಗಳ ಸಂಜ್ಞಾನ.

6ಎ. ದುಷ್ಪ್ರೇರಕರಿಗೆ ದಂಡನೆ

6ಬಿ. ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ

6ಸಿ. ಪದವಿ ಮುಂತಾದವುಗಳ ರದ್ದತಿ

6ಡಿ. ಅಧಿನಿಯಮವು ಇತರ ಕಾನೂನುಗಳ ಮೇಲೆ ಅಧ್ಯಾರೋಹಿ ಪರಿಣಾಮ ಹೊಂದಿರುವುದು

6ಇ. ಅಧಿನಿಯಮವು, ಯಾವುದೇ ನ್ಯಾಯಾಲಯಗಳಲ್ಲಿ ನಿರ್ಧಾರವಾದ ನಿರ್ದಿಷ್ಟ ಪ್ರಕರಣಗಳ ಅನ್ವಯತೆ ಮೇಲೆ ಅಧ್ಯಾರೋಹಿ ಪರಿಣಾಮ ಹೊಂದಿರುವುದು

7.ದಾಖಲೆಗಳ ನಿರ್ವಹಣೆ ಮತ್ತು ವಾರ್ಷಿಕ ವರದಿಯ ಸಲ್ಲಿಸುವಿಕೆ ಮುಂತಾದವುಗಳು.

8.ಸ್ಥಾಯಿ ಸಮಿತಿಯ ರಚನೆ.
9.ಸ್ಥಾಯಿ ಸಮಿತಿಯ ಪ್ರಕಾರ್ಯಗಳು.
10.ವಾರ್ಷಿಕ ವರದಿ.
11.ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.
12.ತೊಂದರೆಗಳ ನಿವಾರಣೆ.
13.ನಿಯಮಗಳ ರಚನಾಧಿಕಾರ.

****

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

### I

**ಅಧಿನಿಯಮ 1991 ಸಂಖ್ಯೆ 7.-** ರಾಜ್ಯ ಸಿವಿಲ್ ಸೇವೆಗಳು ಮುಂತಾದವುಗಳ ನೇಮಕಾತಿಗಳಲ್ಲಿ ಅಥವಾ ಹುದ್ದೆಗಳಲ್ಲಿ ಹಾಗೂ ರಾಜ್ಯ ಸರ್ಕಾರದಿಂದ ಸ್ಥಾಪಿತವಾದ ಮತ್ತು ನಿರ್ವಹಿಸಲಾದ ಶಿಕ್ಷಣ ಸಂಸ್ಥೆಗಳಲ್ಲಿ ಅನುಸೂಚಿತ ಜಾತಿ/ಅನುಸೂಚಿತ ಬುಡಕಟ್ಟುಗಳಿಗೆ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗೆ ಸಾಕಷ್ಟು ಪ್ರಾತಿನಿಧ್ಯ ದೊರೆತಿಲ್ಲ.

ಸಂವಿಧಾನದಲ್ಲಿ ಅನುಸೂಚಿತ ಜಾತಿ/ ಅನುಸೂಚಿತ ಬುಡಕಟ್ಟುಗಳ ಅನುಕೂಲಕ್ಕಾಗಿ ಮೀಸಲಾತಿಯ ಬಗ್ಗೆ ಹೇಳಲಾಗಿದೆ. ಕರ್ನಾಟಕದಲ್ಲಿ ಅನುಸೂಚಿತ ಜಾತಿ/ಅನುಸೂಚಿತ ಬುಡಕಟ್ಟುಗಳಿಗೆ ಅನುಕ್ರಮವಾಗಿ ಶೇಕಡಾ 15 ಮತ್ತು ಶೇಕಡ 3 ರಷ್ಟು ಮೀಸಲಾತಿ ಇದೆ. ಇತರ ಹಿಂದುಳಿದ ವರ್ಗಗಳನ್ನು ಗುರುತಿಸುವುದು ಮತ್ತು ವರ್ಗೀಕರಿಸುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ, ರಾಜ್ಯ ಸರ್ಕಾರವು, ಭಾರತದ ಸಂವಿಧಾನದ 15ನೇ ಅನುಚ್ಛೇದದ (4)ನೇ ಖಂಡ ಮತ್ತು 16ನೇ ಅನುಚ್ಛೇದದ (4)ನೇ ಖಂಡಗಳ ಅಡಿಯಲ್ಲಿ ವಿಶೇಷ ರಿಯಾಯಿತಿಯನ್ನು ನೀಡುವುದಕ್ಕಾಗಿ ಹಿಂದುಳಿದ ವರ್ಗಗಳ ನಾಗರಿಕರನ್ನು ನಿರ್ಧರಿಸುವುದಕ್ಕಾಗಿ ಆಗಿಂದಾಗ್ಗೆ ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗಗಳನ್ನು ನೇಮಿಸಿತು.

ಆಯೋಗದ ಶಿಫಾರಸುಗಳ ಮೇರೆಗೆ, ಸರ್ಕಾರವು, ಭಾರತದ ಸಂವಿಧಾನದ 15ನೇ ಅನುಚ್ಛೇದದ (4)ನೇ ಖಂಡ ಮತ್ತು 16ನೇ ಅನುಚ್ಛೇದದ (4)ನೇ ಖಂಡಗಳ ಉದ್ದೇಶಗಳಿಗಾಗಿ ರಾಜ್ಯದಲ್ಲಿಯ ಹಿಂದುಳಿದ ವರ್ಗಗಳ ನಾಗರಿಕರನ್ನು ವರ್ಗೀಕರಿಸಿದ್ದು, ತದನುಸಾರವಾಗಿ ಆಗಿಂದಾಗ್ಗೆ ಹಿಂದುಳಿದ ವರ್ಗಗಳ ಅನುಕೂಲಕ್ಕಾಗಿ ಅಗತ್ಯ ಮೀಸಲಾತಿಗಳ ಬಗ್ಗೆ ವಿವಿಧ ಆದೇಶಗಳನ್ನು ಹೊರಡಿಸಿದೆ.

ಈಗ, ಈ ಪರವಾಗಿ ಹೊರಡಿಸಿರುವ ಎಲ್ಲ ಆದೇಶಗಳಿಗೆ ಶಾಸನದ ಬೆಂಬಲ ನೀಡಬೇಕೆಂದು ಪ್ರಸ್ತಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕರ್ನಾಟಕ ರಾಜ್ಯ ಪತ್ರ (ವಿಶೇಷ ಪತ್ರಿಕೆ) ಭಾಗ 4-2ಎ ನಂ. 623 ಪುಟ 8 ದಿನಾಂಕ 27.11.1990ರಲ್ಲಿ ಪ್ರಕಟಿಸಲಾಗಿದೆ)

### II

**1997ರ ತಿದ್ದುಪಡಿ ಅಧಿನಿಯಮ 27.-** ಪ್ರಸ್ತುತ, ತಹಶೀಲ್ದಾರರು ಜಾತಿ ಪ್ರಮಾಣ ಪತ್ರಗಳನ್ನು ಹಾಗೂ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು ನೀಡುತ್ತಿದ್ದಾರೆ. ಆದರೆ ರಿಟ್ ಅರ್ಜಿ ಸಂಖ್ಯೆ 4360/97 ಷಬಾಜ್ ಹುಸೇನ್ ವಿರುದ್ಧ ರಾಜ್ಯ ಮತ್ತು ಇತರರು ಹಾಗೂ ರಿಟ್ ಅರ್ಜಿ ಸಂಖ್ಯೆ 4808-81/97, ನಂದೀಶ್ ವಿರುದ್ಧ ತಹಶೀಲ್ದಾರ್ - ಇವುಗಳಲ್ಲಿ ಕರ್ನಾಟಕ ಅನುಸೂಚಿತ ಜಾತಿ/ಅನುಸೂಚಿತ ಬುಡಕಟ್ಟುಗಳು ಮತ್ತು ಇತರ

ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ಅಧಿನಿಯಮ, 1990ರಲ್ಲಿ ಅನುಸೂಚಿತ ಜಾತಿಗಳವರಿಗೆ ಮತ್ತು ಅನುಸೂಚಿತ ಬುಡಕಟ್ಟುಗಳವರಿಗೆ "ಜಾತಿ ಪ್ರಮಾಣ ಪತ್ರಗಳನ್ನು" ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗೆ "ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳನ್ನು" ತಹಶೀಲ್ದಾರರು ನೀಡುವುದಕ್ಕೆ ಅಧಿಕಾರ ಕೊಡತಕ್ಕ ಯಾವುದೇ ಉಪಬಂಧವಿಲ್ಲ ಎಂಬುದಾಗಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಲಯವು ಅಭಿಪ್ರಾಯಪಟ್ಟಿದೆ. ಅಲ್ಲದೆ ಸದರಿ ಅಧಿನಿಯಮವು ತಹಶೀಲ್ದಾರರ ನಿರ್ಣಯದ ವಿರುದ್ಧ ಅಪೀಲು ಮಾಡಿಕೊಳ್ಳಲು ಯಾವುದೇ ಉಪಬಂಧ ಕಲ್ಪಿಸಿಲ್ಲ. ಆದ್ದರಿಂದ ತಹಶೀಲ್ದಾರರು ಯಾವುದೇ ಪ್ರಮಾಣ ಪತ್ರ ನೀಡಲು ಸಕ್ಷಮರಲ್ಲ ಎಂಬುದಾಗಿ ಉಚ್ಚ ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

ಆದರೆ ಜಾತಿ ಪ್ರಮಾಣ ಪತ್ರಗಳು ಅಥವಾ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳು ಇಲ್ಲದೆ ವಿವಿಧ ಶೈಕ್ಷಣಿಕ ಸಂಸ್ಥೆಗಳಲ್ಲಿ ಅನುಸೂಚಿತ ಜಾತಿಗಳು/ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ ಪ್ರವರ್ಗಗಳಿಗೆ ನೀಡಲಾದ ಮೀಸಲಾತಿಯ ಆಧಾರದ ಮೇಲೆ ಆಯ್ಕೆಯಾಗಲು ಆ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯುಂಟಾಗುತ್ತಿದೆ.

ಆದ್ದರಿಂದ ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳಲ್ಲಿ ಮೀಸಲಾತಿ) ಅಧಿನಿಯಮ, 1990ಕ್ಕೆ ಈ ಮುಂದಿನ ಕಾರಣಗಳಿಗಾಗಿ ತಿದ್ದುಪಡಿ ಮಾಡುವುದು ಅಗತ್ಯವೆಂದು ಭಾವಿಸಲಾಗಿದೆ:-

(೧) ಜಾತಿ ಪ್ರಮಾಣ ಪತ್ರ ಮತ್ತು ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ನೀಡಲು ಸಕ್ಷಮನಾದ ಪ್ರಾಧಿಕಾರಿಯನ್ನು ಸೂಚಿಸಲು ಮತ್ತು ಅಂಥ ಪ್ರಮಾಣ ಪತ್ರಗಳನ್ನು ನೀಡುವುದಕ್ಕಾಗಿ ಅರ್ಜಿಗಳನ್ನು ವಿಲೆ ಮಾಡುವಲ್ಲಿ ಅನುಸರಿಸಬೇಕಾದ ಕಾರ್ಯ ವಿಧಾನ.

(೨) ಪ್ರಮಾಣ ಪತ್ರಗಳನ್ನು ನೀಡಲು ಸಕ್ಷಮನಾದ ಪ್ರಾಧಿಕಾರಿಯ ಆದೇಶದ ವಿರುದ್ಧ ಅಪೀಲು ಸಲ್ಲಿಸಲು ಸಾಧ್ಯವಾಗುವಂತೆ ಉಪಬಂಧ ಕಲ್ಪಿಸುವುದು.

(೩) ಪರಿಶೀಲನಾ ಸಮಿತಿಯ ರಚನೆಗೆ ಮತ್ತು ಸಿಂಧುತ್ವ ಪ್ರಮಾಣ ಪತ್ರವನ್ನು ನೀಡುವುದಕ್ಕೆ ಉಪಬಂಧ ಕಲ್ಪಿಸುವುದು.

(೪) ಪರಿಶೀಲನಾ ಸಮಿತಿಯ ಆದೇಶದ ವಿರುದ್ಧ ಅಪೀಲು ಸಲ್ಲಿಸಲು ಉಪಬಂಧ ಕಲ್ಪಿಸುವುದು.

ಆದ್ದರಿಂದ ಈ ವಿಧೇಯಕ.

(1997ನೇ ವಿಧಾನ ಪರಿಷತ್ತಿನ ವಿಧೇಯಕ ಸಂಖ್ಯೆ 2 ರಲ್ಲಿದ್ದಂತೆ.)

## III

**2004ರ ತಿದ್ದುಪಡಿ ಅಧಿನಿಯಮ ಸಂಖ್ಯೆ: 7.–** ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ

ಮುಂತಾದುವುಗಳ ಮೀಸಲಾತಿ) ಅಧಿನಿಯಮ, 1990ರ ಅಡಿಯಲ್ಲಿ ರಚಿಸಿದ ನಿಯಮಗಳನ್ನು ರಾಜ್ಯ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಸದರಿ ಅಧಿನಿಯಮದ 13ನೇ ಪ್ರಕರಣವನ್ನು ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕಡತ ಸಂಖ್ಯೆ: ಸಂವ್ಯಶಾಇ 39 ಶಾಸನ 2003)

## IV

**2004ರ ತಿದ್ದುಪಡಿ ಅಧಿನಿಯಮ 8.–** ಸರ್ಕಾರವು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳಿಗೆ ಮೀಸಲಿಟ್ಟ ಖಾಲಿ ಹುದ್ದೆಗಳನ್ನು ತುಂಬುವುದಕ್ಕಾಗಿ ಕರ್ನಾಟಕ ಸಿವಿಲ್ ಸೇವಾ (ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಮೀಸಲಿಟ್ಟ, ಭರ್ತಿ ಮಾಡದ ಖಾಲಿ ಹುದ್ದೆಗಳು) (ವಿಶೇಷ ನೇಮಕಾತಿ) ನಿಯಮಗಳು, 2001ರ ಅಡಿಯಲ್ಲಿ 21.11.2001 ರಂದು ಒಂದು ಅಧಿಸೂಚನೆಯನ್ನು ಹೊರಡಿಸಿತು. ಈ ವಿಶೇಷ ನೇಮಕಾತಿ ನಿಯಮಗಳನ್ನು ಕರ್ನಾಟಕ ಸಿವಿಲ್ ಸೇವಾ ಅಧಿನಿಯಮ, 1978ರ (1990ರ ಕರ್ನಾಟಕ ಅಧಿನಿಯಮ 14) 3ನೇ ಪ್ರಕರದ (2)ನೇ ಉಪ ಪ್ರಕರಣದ (ಎ) ಖಂಡದ ಅಡಿಯಲ್ಲಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 13 ಎಸ್ ಬಿ ಸಿ 2001 ದಿ:6ನೇ ಆಗಸ್ಟ್ 2001ರಲ್ಲಿ ಪ್ರಕಟಿಸಲಾಯಿತು. ಸೇವಾ ಷರತ್ತುಗಳು ಕರ್ನಾಟಕ ಸಿವಿಲ್ ಸೇವಾ ಅಧಿನಿಯಮ 1978ಕ್ಕೆ ಒಳಪಡುವ ಕಡೆಗಳಲ್ಲಿ ಎಲ್ಲ ನೇಮಕ ಪ್ರಾಧಿಕಾರಿಗಳು ಭರ್ತಿ ಮಾಡದ ಖಾಲಿ ಹುದ್ದೆಗಳನ್ನು ತುಂಬುವುದಕ್ಕಾಗಿ ಈ ಅಧಿಸೂಚನೆಯನ್ನು ಹೊರಡಿಸಲಾಯಿತು. ಸಚಿವ ಸಂಪುಟವು, ಈ ಬಗ್ಗೆ ಮೇಲ್ವಿಚಾರಣೆ ಹಾಗು ಪ್ರಗತಿಯ ಪರಿಶೀಲನೆ ಮಾಡಲು ಒಂದು ಸಚಿವ ಸಂಪುಟ ಉಪಸಮಿತಿಯನ್ನು ನೇಮಕ ಮಾಡಿತು. ಸಮಾಜ ಕಲ್ಯಾಣ ಇಲಾಖೆಯನ್ನು "ನೋಡಲ್" ಇಲಾಖೆಯಾಗಿ ಮಾಡಲಾಯಿತು. ಇಂದಿನವರೆಗೆ ಸಮಾಜ ಕಲ್ಯಾಣ ಇಲಾಖೆಯು 17021 ಖಾಲಿ ಹುದ್ದೆಗಳನ್ನು ಗುರುತಿಸಿದ್ದು ಆ ಪೈಕಿ 14485 ಹುದ್ದೆಗಳನು ಅಧಿಸೂಚಿಸಲಾಗಿದ್ದು, ಅದರಲ್ಲಿ 11573 ಖಾಲಿ ಹುದ್ದೆಗಳನ್ನು ತುಂಬಲಾಗಿದ್ದು ಉಳಿದ ಖಾಲಿ ಹುದ್ದೆಗಳನ್ನು ತುಂಬುವ ಪ್ರಕ್ರಿಯೆ ನಡೆಯುತ್ತಿದೆ. ಪರಿಶೀಲನಾ ಸಭೆ ನಡೆಯುತ್ತಿರುವಾಗ, ಕೃಷಿ ವಿಶ್ವವಿದ್ಯಾನಿಲಯವೂ ಸೇರಿದಂತೆ ವಿಶ್ವವಿದ್ಯಾನಿಲಯಗಳು ಹಾಗೂ ಇತರ ಸಂಸ್ಥೆಗಳು ಮುಂತಾದವು ಸದರಿ ನಿಯಮಗಳ ವ್ಯಾಪ್ತಿಯೊಳಗೆ ಬರುವುದಿಲ್ಲವಾದ್ದರಿಂದ, ಕರ್ನಾಟಕ ಸಿವಿಲ್ ಸೇವಾ (ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳಿಗಾಗಿ ಮೀಸಲಿಟ್ಟ ಭರ್ತಿ ಮಾಡದ ಖಾಲಿ ಹುದ್ದೆಗಳು) (ವಿಶೇಷ ನೇಮಕಾತಿ) ನಿಯಮಗಳು, 2001, ಅವುಗಳಿಗೆ ಅನ್ವಯವಾಗುವುದಿಲ್ಲವೆಂಬ ಅಂಶವನ್ನು ಗಮನಕ್ಕೆ ತರಲಾಯಿತು. ಈ ಸಂಸ್ಥೆಗಳನ್ನು 21.11.2001 ಮತ್ತು 1.6.2002ನೇ ದಿನಾಂಕ ಅಧಿಸೂಚನೆಗಳ ವ್ಯಾಪ್ತಿಗೊಳಪಡಿಸದೇ ಇರುವುದರಿಂದ ವಿಶ್ವವಿದ್ಯಾನಿಲಯಗಳು ಮತ್ತು ಇತರ ಸಂಸ್ಥೆಗಳು

ಮೀಸಲಾತಿ ಹಳೆ ಬಾಕಿ (ಬ್ಯಾಕ್ ಲಾಗ್ ) ಹುದ್ದೆಗಳನ್ನು ತುಂಬಿರುವುದಕ್ಕೆ ಕಾನೂನಿನ ಬೆಂಬಲ ಇಲ್ಲದಂತೆ ಆಗುತ್ತದೆ.

ಈ ಸಂಸ್ಥೆಗಳಲ್ಲಿ ಅಂದರೆ, ವಿಶ್ವವಿದ್ಯಾನಿಲಯ ಮುಂತಾದುವುಗಳಲ್ಲಿ ಈಗಾಗಲೇ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳೆರಡರಲ್ಲೂ ನೇಮಕಾತಿಯ ಪ್ರಕ್ರಿಯೆಯು ಶೇಕಡಾ 80ರಷ್ಟು ಪೂರ್ಣಗೊಂಡಿದೆ ಮತ್ತು ನೇಮಕಗೊಂಡ ವ್ಯಕ್ತಿಗಳು ಈಗಾಗಲೇ ಕೆಲಸಕ್ಕೆ ಹಾಜರಾಗಿದ್ದು ಕಾರ್ಯನಿರತರಾಗಿದ್ದಾರೆ. ಈ ಹಿನ್ನಲೆಯಲ್ಲಿ ಈಗಾಗಲೇ ಮಾಡಿದ ನೇಮಕಾತಿಗಳನ್ನು ಕಾನೂನುಬದ್ಧಗೊಳಿಸಲು ಅಧಿನಿಯಮಕ್ಕೆ ತಿದ್ದುಪಡಿ ಮಾಡುವುದು ತೀರಾ ಅವಶ್ಯವಾಗಿದೆ. ಯಾವುದೇ ಕಾನೂನಿನ ತಕರಾರುಗಳನ್ನು ತಪ್ಪಿಸಲು, ಎರಡನೆ ತಿದ್ದುಪಡಿ ಅಧಿನಿಯಮದ ಉಪಬಂಧಗಳು, ಈಗಾಗಲೇ ಮಾಡಿದ ಯಾವುದೇ ನೇಮಕಕ್ಕೆ, ಹಾಗೆ ನೇಮಕ ಮಾಡುವಾಗ ಗೊತ್ತುಪಡಿಸಲಾದ ಪ್ರಕ್ರಿಯೆಯನ್ನು ಪೂರ್ಣವಾಗಿ ಅಥವಾ ಭಾಗಶ: ಅನುಸರಿಸಿಲ್ಲವೆಂಬ ಆಧಾರದ ಮೇಲೆ ಬಾಧೆ ಉಂಟು ಮಾಡುವುದಿಲ್ಲ ಎಂಬ ಒಂದು ಉಪಬಂಧವನ್ನು ಕಲ್ಪಿಸಲಾಗಿದೆ.

ಕರ್ನಾಟಕ ಅನುಸೂಚಿಯ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿಗಳ ಮೀಸಲಾತಿ ಇತ್ಯಾದಿ) (ತಿದ್ದುಪಡಿ) ನಿಯಮಗಳು, 2000ರ 7ನೇ ನಿಯಮದ (5)ನೇ ಉಪ ನಿಯಮದ ಅಡಿಯಲ್ಲಿ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ ಜಾತಿ ಪರಿಶೀಲನೆ ಮತ್ತು ನಿರ್ಧರಣೆಗೆ ಸಂಬಂಧಪಟ್ಟ ಎಲ್ಲಾ ಪ್ರಕರಣಗಳೀಗೆ ವಿಭಾಗೀಯ ಕಮೀಷನರು ಅಪೀಲು ಪ್ರಾಧಿಕಾರವಾಗಿದ್ದರು. ವಿಭಾಗೀಯ ಕಮೀಷನರವರ ಹುದ್ದೆಗಳನ್ನು ಈಗ ರದ್ದುಪಡಿಸಲಾಗಿದೆ ಮತ್ತು ಅವರ ಎಲ್ಲ ಅಪೀಲು ಅಥವಾ ಪುನರೀಕ್ಷಣಾ ಅಧಿಕಾರಗಳನ್ನು ಕಂದಾಯ ಇಲಾಖೆಯು, ತನ್ನ ಅಧಿಸೂಚನೆ ಸಂಖ್ಯೆ ಆರ್ ಡಿ 54 ಸಮಿತಿ 2002 ದಿನಾಂಕ 20.1.2003ರಲ್ಲಿ ಕರ್ನಾಟಕ ಅಪೀಲು ನ್ಯಾಯಾಧಿಕರಣಕ್ಕೆ ಪ್ರದಾನ ಮಾಡಿತು. ತರುವಾಯ, ಕರ್ನಾಟಕ ಭೂ ಕಂದಾಯ ಅಧಿನಿಯಮ 1964ನ್ನು 2003ರ ತಿದ್ದುಪಡಿ ಅಧಿನಿಯಮ 21ರ ಮೂಲಕ ತಿದ್ದುಪಡಿ ಮಾಡಲಾಯಿತು ಮತ್ತು ಯಾವುದೇ ಇತರೆ ಅಧಿನಿಯಮಿತಿ ಅಥವಾ ನಿಯಮಗಳ ಅಡಿಯಲ್ಲಿ ವಿಭಾಗೀಯ ಕಮೀಷನರನ ಯಾವುದೇ ಅಪೀಲು ಅಥವಾ ಪುನರೀಕ್ಷಣಾ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ಪ್ರದಾನ ಮಾಡಲಾಯಿತು. ಅದರಂತೆ ತನ್ನ ಅಪೀಲು ಸಂಖ್ಯೆ 127/03 ಮತ್ತು ಮುಂತಾದುವು ದಿ: 19.8.2003ರಲ್ಲಿ ರಿಜಿಸ್ಟ್ರಾರ್, ಕರ್ನಾಟಕ ಅಪೀಲು ನ್ಯಾಯಾಧಿಕರಣ, ಬೆಂಗಳೂರು ಅವರು ಅಂಥ ಪ್ರಕರಣಗಳನ್ನು ನಡೆಸಲು ಸರ್ಕಾರವು ಸೂಕ್ತ ಪ್ರಾಧಿಕಾರವಾಗಿರುತ್ತದೆ ಎಂದು ಹೇಳುತ್ತಾ ಅಂಥ ಎಲ್ಲಾ ಕಡತಗಳನ್ನು ಹಿಂತಿರುಗಿಸಿರುತ್ತಾರೆ. ಹೀಗಾಗಿ, ಆಗಿನ ವಿಭಾಗೀಯ ಕಮೀಷನರುಗಳ ಸ್ಥಾನದಲ್ಲಿ ಒಂದು ಅಪೀಲು ಪ್ರಾಧಿಕಾರವೆಂಬಂತೆ ಕಾರ್ಯನಿರ್ವಹಿಸಲು ಸೂಕ್ತ ಪ್ರಾಧಿಕಾರ ಒಂದನ್ನು ಒದಗಿಸಬೇಕಾದ ತುರ್ತು ಅಗತ್ಯತೆ ಉಂಟಾಗಿದೆ.

ಕಾರ್ಯಸ್ವರೂಪ ಮತ್ತು ಕಾರ್ಯಬಾಹುಳ್ಯವನ್ನು ಪರಿಗಣಿಸಿ, ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ ಕಲ್ಯಾಣ ಕಾರ್ಯಗಳನ್ನು ಮತ್ತು ಸಂಬಂಧಪಟ್ಟ ವಿಷಯಗಳನ್ನು ನೋಡಿಕೊಳ್ಳುತ್ತಾ ಬಂದಿರುವ ಇಲಾಖಾ ಮುಖ್ಯಸ್ಥರಿಗೆ, ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ ವಿವಾದಾಂಶಗಳು ಚೆನ್ನಾಗಿ ತಿಳಿದಿದ್ದು ಅವರನ್ನು ವಿಭಾಗೀಯ ಕಮೀಷನರವರ ಸ್ಥಾನದಲ್ಲಿ ಜಿಲ್ಲಾ ಜಾತಿ ಪರಿಶೀಲನಾ ಸಮಿತಿ/ಜಿಲ್ಲಾ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿಯ ಆದೇಶಗಳ ವಿರುದ್ಧ ಅಪೀಲು ಪ್ರಾಧಿಕಾರವೆಂಬಂತೆ ಕಾರ್ಯನಿರ್ವಹಿಸುವ ಅಧಿಕಾರಗಳನ್ನು ನಿಹಿತಗೊಳಿಸುವುದು ಅವಶ್ಯ ಎಂದು ಪರಿಭಾವಿಸಲಾಯಿತು.

ಮೇಲ್ಕಂಡ ಅಂಶಗಳಿಂದ, ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದುವುಗಳ ಮೀಸಲಾತಿ) ಅಧಿನಿಯಮ, 1990ಕ್ಕೆ ತಿದ್ದುಪಡಿ ತರುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(ಕಡತ ಸಂಖ್ಯೆ: ಸಂವ್ಯಶಾಇ 74 ಶಾಸನ 2003)

## V

**2007ರ ತಿದ್ದುಪಡಿ ಅಧಿನಿಯಮ 17.-** ಸರ್ಕಾರಿ ಆದೇಶ ಸಂಖ್ಯೆ:ಆರ್‌ಡಿ 9 ಬಿಎಂಎಂ 2003, ದಿನಾಂಕ: 8.9.2005ರಲ್ಲಿ ಬೆಂಗಳೂರು, ಮೈಸೂರು, ಗುಲ್ಬರ್ಗಾ ಮತ್ತು ಬೆಳಗಾಂಗಳಲ್ಲಿ ಪ್ರಾದೇಶಿಕ ಕಮೀಷನರುಗಳ ಹುದ್ದೆಗಳನ್ನು ಹಾಗೂ ಅವರಿಗೆ ಸಹಾಯಕ ಸಿಬ್ಬಂದಿಯ ಹುದ್ದೆಗಳನ್ನು ಸೃಜನೆ ಮಾಡಲಾಗಿದೆ.

ಸಂಬಂಧಪಟ್ಟ ಅಧಿನಿಯಮಗಳಿಗೆ ಅವಶ್ಯಕ ತಿದ್ದುಪಡಿಗಳನ್ನು ಮಾಡಿ ಪ್ರಾದೇಶಿಕ ಕಮೀಷನರುಗಳಿಗೆ, ಶಾಸನಬದ್ಧ ಅಧಿಕಾರಗಳನ್ನು ಕೊಡಬೇಕಾಗಿದೆ.

ವಿಷಯವು ತುರ್ತು ಸ್ವರೂಪದ್ದಾದ್ದರಿಂದ ಮತ್ತು ಕರ್ನಾಟಕ ವಿಧಾನಮಂಡಲವು ಅಧಿವೇಶನದಲ್ಲಿಲ್ಲದೇ ಇದ್ದುದರಿಂದ ಕರ್ನಾಟಕ ಭೂ-ಕಂದಾಯ ಮತ್ತು ಇತರೆ ಕೆಲವು ಕಾನೂನುಗಳ (ತಿದ್ದುಪಡಿ) ಅಧ್ಯಾದೇಶ, 2006 (2006ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 5)ನ್ನು ಮೇಲಿನ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಪ್ರಖ್ಯಾಪಿಸಲಾಯಿತು.

ಆದ್ದರಿಂದ ಈ ವಿಧೇಯಕ.

(2007ರ ವಿಧಾನಸಭೆಯ ವಿಧೇಯಕ ಸಂಖ್ಯೆ 7)

[ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 5 ಮತ್ತು 18ನೆಯ ನಮೂದನೆಗಳ ಅಡಿಯಲ್ಲಿ ಬರುತ್ತದೆ.]

## VI

**2012ರ ತಿದ್ದುಪಡಿ ಅಧಿನಿಯಮ ಸಂಖ್ಯೆ 7.–** ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ ಸದಸ್ಯರುಗಳ ಸಲುವಾಗಿ ಅವರಿಗೆ ಸಾಕಷ್ಟು ಪ್ರಾತಿನಿಧ್ಯವನ್ನು ನೀಡುವ ದೃಷ್ಟಿಯಿಂದ, ರಾಜ್ಯ ಸಿವಿಲ್ ಸೇವೆಗಳಲ್ಲಿ ಮತ್ತು ಸಾರ್ವಜನಿಕ ವಲಯದಲ್ಲಿಯ ಉದ್ಯಮಗಳಲ್ಲಿ ನೇಮಕಾತಿ ಅಥವಾ ಹುದ್ದೆಗಳ ಮೀಸಲಾತಿಗಾಗಿ ಮತ್ತು ರಾಜ್ಯ ಸರ್ಕಾರವು ಸ್ಥಾಪಿಸಿರುವ ಅಥವಾ ನಿರ್ವಹಿಸುತ್ತಿರುವ ಅಥವಾ ಅನುದಾನ ನೀಡುತ್ತಿರುವ ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವುದಕ್ಕಾಗಿ ಉಪಬಂಧ ಕಲ್ಪಿಸಲು ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) ಅಧಿನಿಯಮ, 1990ನ್ನು ಅಧಿನಿಯಮಿಸಲಾಯಿತು. ಅನೇಕ ಪ್ರಕರಣಗಳಲ್ಲಿ ನೀಡಿಕೆ ಪ್ರಾಧಿಕಾರಗಳ ಪರೋಕ್ಷ ಸಮ್ಮತಿಯಿಂದ ಸುಳ್ಳು ಜಾತಿ ಪ್ರಮಾಣ ಪತ್ರ ಮತ್ತು ಆದಾಯ ಮತ್ತು ಜಾತಿ ಪ್ರಮಾಣ ಪತ್ರಗಳನ್ನು ಪಡೆದುಕೊಳ್ಳುತ್ತಿರುವುದು ಮತ್ತು ಅದರಿಂದಾಗಿ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ ಸದಸ್ಯರಿಗೆ ದೊರೆಯುತ್ತಿದ್ದ ಮೀಸಲಾತಿ ಪ್ರಯೋಜನದಿಂದ ಅವರು ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆದ್ದರಿಂದ ಈ ಮುಂದಿನವುಗಳ ಸಲುವಾಗಿ ಉಪಬಂಧಿಸಲು ಸದರಿ ಅಧಿನಿಯಮಕ್ಕೆ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,–

(i) ಸಿವಿಲ್ ನ್ಯಾಯಾಲಯದ ಕೆಲವು ಅಧಿಕಾರಗಳನ್ನು, ಪರಿಶೀಲನಾ ಸಮಿತಿಗೆ ಮತ್ತು ತಹಶೀಲ್ದಾರರಿಗೆ ವಹಿಸಿಕೊಡುವುದು;

(ii) ಸುಳ್ಳು ಜಾತಿ ಪ್ರಮಾಣ ಪತ್ರ ಅಥವಾ ಆದಾಯ ಮತ್ತು ಜಾತಿ ಪ್ರಮಾಣ ಪತ್ರಗಳನ್ನು ಪಡೆಯುವುದಕ್ಕಾಗಿ ಮತ್ತು ಅಂಥ ಪ್ರಮಾಣ ಪತ್ರಗಳನ್ನು ನೀಡುವುದಕ್ಕಾಗಿ ಕೂಡ ದಂಡಗಳನ್ನು ವಿಧಿಸುವುದು;

(iii) ಅಪರಾಧಗಳ ಸಂಕ್ಷಿಪ್ತ ಅಧಿವಿಚಾರಣೆ ನಡೆಸುವುದು;

(iv) ಸಿವಿಲ್ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಪ್ರತಿಷೇಧಿಸುವುದು;

(v) ಒಬ್ಬ ವ್ಯಕ್ತಿಯು, ಸುಳ್ಳು ಜಾತಿ ಪ್ರಮಾಣ ಪತ್ರ ಅಥವಾ ಆದಾಯ ಮತ್ತು ಜಾತಿ ಪ್ರಮಾಣ ಪತ್ರದ ಆಧಾರದ ಮೇಲೆ ಒಂದು ಶಿಕ್ಷಣ ಸಂಸ್ಥೆಯಲ್ಲಿ ಪ್ರವೇಶ ಪಡೆದು ಅರ್ಜಿಸಿದ ಪದವಿಯನ್ನು ರದ್ದುಗೊಳಿಸುವುದು.

ಇತರ ಕೆಲವು ಪ್ರಾಸಂಗಿಕ ಉಪಬಂಧಗಳನ್ನು ಸಹ ಮಾಡಲಾಗಿದೆ.

ಆದ್ದರಿಂದ ಈ ವಿಧೇಯಕ.

(2011ರ ವಿಧಾನಸಭೆಯ ವಿಧೇಯಕ ಸಂಖ್ಯೆ:42, ಕಡತ ಸಂಖ್ಯೆ:ಸಂವ್ಯಶಾಇ 54 ಶಾಸನ 2011)

(ಭಾರತ ಸಂವಿಧಾನದ 7ನೇ ಅನುಸೂಚಿಯ 2ನೇ ಪಟ್ಟಿಯ 41 ಹಾಗೂ 3ನೇ ಪಟ್ಟಿಯ 23 ಮತ್ತು 25ನೆಯ ನಮೂದನೆಯಡಿಯಲ್ಲಿ ಬರುತ್ತದೆ.)

* * * *

**1991ರ ಕರ್ನಾಟಕ ಅಧಿನಿಯಮ ಸಂಖ್ಯೆ 7**

*(1991ರ ಮಾರ್ಚ್ 7ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)*

**ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ)ಅಧಿನಿಯಮ, 1990**

*(1991ರ ಮಾರ್ಚ್ 4ನೇ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)*

(1997 ರ 27, 2004ರ 7, 2004ರ 8, 2007ರ 17 ಮತ್ತು 2012ರ 7ನೇ ಅಧಿನಿಯಮದಲ್ಲಿ ತಿದ್ದುಪಡಿಯಾದಂತೆ)

ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ ಅನುಕೂಲಕ್ಕಾಗಿ ರಾಜ್ಯ ಸಿವಿಲ್ ಸೇವೆಗಳು ಮತ್ತು ಸರ್ಕಾರಿ ವಲಯದ ಸಂಸ್ಥೆಗಳಲ್ಲಿ ನೇಮಕಾತಿಗಳು ಅಥವಾ ಹುದ್ದೆಗಳ ಬಗ್ಗೆ ಹಾಗೂ ವಿಶ್ವವಿದ್ಯಾನಿಲಯಗಳಿಗೆ ಮತ್ತು ರಾಜ್ಯ ಸರ್ಕಾರದಿಂದ ಸ್ಥಾಪಿತವಾದ ಅಥವಾ ನಿರ್ವಹಿಸಲಾದ ಅಥವಾ ಅನುದಾನ ಪಡೆದ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶದ ಬಗ್ಗೆ ಮೀಸಲಾತಿಗಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ರಾಜ್ಯ ಸಿವಿಲ್ ಸೇವೆಗಳು ಮತ್ತು ಸರ್ಕಾರಿ ವಲಯದ ಸಂಸ್ಥೆಗಳ ಸೇವೆಗಳು ಅಥವಾ ಹುದ್ದೆಗಳಲ್ಲಿ ಹಾಗೂ ವಿಶ್ವವಿದ್ಯಾನಿಲಯಗಳಿಗೆ ಮತ್ತು ರಾಜ್ಯ ಸರ್ಕಾರದಿಂದ ಸ್ಥಾಪಿತವಾದ ಅಥವಾ ನಿರ್ವಹಿಸಲಾದ ಅಥವಾ ಅನುದಾನ ಪಡೆದ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಹೊಂದಿದ ವಿದ್ಯಾರ್ಥಿಗಳ ಪೈಕಿ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ ನಾಗರಿಕರ ಪ್ರಾತಿನಿಧ್ಯ ಸಾಕಷ್ಟು ಇಲ್ಲದಿರುವುದರಿಂದ ಮತ್ತು ಅವರ ಅನುಕೂಲಕ್ಕಾಗಿ ಅಂಥ ಮೀಸಲಾತಿಯನ್ನು ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ನಲವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಚಿಕ್ಕ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿಗಳು ಮುಂತಾದವುಗಳ ಮೀಸಲಾತಿ) ಅಧಿನಿಯಮ, 1990 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ [1][ದಿನಾಂಕದಂದು][1] ಜಾರಿಯಲ್ಲಿ ಬರತಕ್ಕದ್ದು.

1. ಈ ಅಧಿನಿಯಮವು ದಿ:1.6.1992ರಿಂದ ಅಧಿಸೂಚನೆಯ ಮೂಲಕ ಜಾರಿಗೆ ಬಂದಿದೆ.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯ ಪಡಿಸಿದ ಹೊರತು,-

(1)"ಗೊತ್ತುಪಡಿಸಲಾದ ದಿನಾಂಕ" ಎಂದರೆ, 1ನೇ ಪ್ರಕರಣದ (2)ನೇ ಉಪ-ಪ್ರಕರಣದ ಆಡಿಯಲ್ಲಿ ಅಧಿಸೂಚಿತವಾದ ದಿನಾಂಕ;

(2) ಸೇವೆ ಅಥವಾ ಹುದ್ದೆಗಳ ಸಂಬಂಧದಲ್ಲಿ "ನೇಮಕಾತಿ ಪ್ರಾಧಿಕಾರಿ" ಎಂದರೆ, ಅಂಥ ಸೇವೆ ಅಥವಾ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲು ಅಧಿಕಾರ ಹೊಂದಿರುವ ಪ್ರಾಧಿಕಾರಿ;

(3) "ಸರ್ಕಾರಿ ವಲಯದ ಸಂಸ್ಥೆಗಳು," ಎಂದರೆ,-

(೧) ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ, 1959ರ ಅಡಿಯಲ್ಲಿ ನೋಂದಾಯಿತವಾದ ಅಥವಾ ನೋಂದಾಯಿತವಾಗಿದೆಯೆಂದು ಭಾವಿಸಲಾದ ಒಂದು ಸಹಕಾರಿ ಸಂಘ ;

(ಬ) ರಾಜ್ಯ ಸರ್ಕಾರದಿಂದ ಸ್ಥಾಪಿತವಾದ ಅಥವಾ ನಿರ್ವಹಿಸಲಾದ ಅಥವಾ ಅನುದಾನ ಪಡೆದ ಒಂದು ಶಿಕ್ಷಣ ಸಂಸ್ಥೆ;

(ಋ) ಕಂಪನಿಗಳ ಅಧಿನಿಯಮ, 1956ರ 617ನೇ ಪ್ರಕರಣದ ಅರ್ಥ ವ್ಯಾಪ್ತಿಯಲ್ಲಿ ಒಂದು ಸರ್ಕಾರಿ ಕಂಪನಿ;

(೧ತ) ಒಂದು ಸ್ಥಳೀಯ ಪ್ರಾಧಿಕಾರ;

(ತ) ರಾಜ್ಯ ಅಥವಾ ಕೇಂದ್ರ ಅಧಿನಿಯಮಗಳ ಮೂಲಕ ಅಥವಾ ಅಡಿಯಲ್ಲಿ ಸ್ಥಾಪಿತವಾದ ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಒಂದು ಶಾಸನಪ್ರದತ್ತ ನಿಕಾಯ ಅಥವಾ ನಿಗಮ;

(ತು) ರಾಜ್ಯ ವಿಧಾನಮಂಡಲದ ಯಾವುದೇ ಕಾನೂನಿನ ಮೂಲಕ ಅಥವಾ ಅಡಿಯಲ್ಲಿ ಸ್ಥಾಪಿತವಾದ ಅಥವಾ ಸ್ಥಾಪಿತವಾಗಿದೆಯೆಂದು ಭಾವಿಸಲಾದ ಒಂದು ವಿಶ್ವವಿದ್ಯಾನಿಲಯ;

(4) "ಇತರ ಹಿಂದುಳಿದ ವರ್ಗಗಳು" ಎಂದರೆ, ಸಂವಿಧಾನದ 15ನೇ ಅನುಚ್ಛೇದದ (4)ನೇ ಖಂಡ ಮತ್ತು 16ನೇ ಅನುಚ್ಛೇದದ (4)ನೇ ಖಂಡದ ಅಡಿಯಲ್ಲಿ ಆಗಿಂದಾಗ್ಗೆ ರಾಜ್ಯ ಸರ್ಕಾರದ ಮೂಲಕ ಅಧಿಸೂಚಿತವಾದ ಕೋಮುಗಳು, ಜಾತಿಗಳು, ಮತ್ತು ಬುಡಕಟ್ಟುಗಳು;

(5) "ಅನುಸೂಚಿತ ಜಾತಿಗಳು" ಎಂಬುದು ಭಾರತದ ಸಂವಿಧಾನದ 341ನೇ ಅನುಚ್ಛೇದದ ಅಡಿಯಲ್ಲಿ ಮಾಡಲಾದ ಮತ್ತು ಆಗಿಂದಾಗ್ಗೆ ತಿದ್ದುಪಡಿಗೊಳಿಸಲಾದ ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ, 1950ರಲ್ಲಿ ನಿರ್ದಿಷ್ಟಪಡಿಸಲಾದ ಅನುಸೂಚಿತ ಜಾತಿಗಳಿಗೆ ಉಲ್ಲೇಖ ಹೊಂದಿರತಕ್ಕದ್ದು;

(6) "ಅನುಸೂಚಿತ ಬುಡಕಟ್ಟುಗಳು" ಎಂಬುದು, ಭಾರತ ಸಂವಿಧಾನದ 342ನೇ ಅನುಚ್ಛೇದದ ಅಡಿಯಲ್ಲಿ ಮಾಡಲಾದ ಮತ್ತು ಆಗಿಂದಾಗ್ಗೆ ತಿದ್ದುಪಡಿಗೊಳಿಸಲಾದ ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) ಆದೇಶ, 1950ರಲ್ಲಿ ನಿರ್ದಿಷ್ಟಗೊಳಿಸಲಾದ ಅನುಸೂಚಿತ ಬುಡಕಟ್ಟುಗಳಿಗೆ ಉಲ್ಲೇಖ ಹೊಂದಿರತಕ್ಕದ್ದು.

(7) "ಸೇವೆ ಅಥವಾ ಹುದ್ದೆ" ಎಂದರೆ ಕರ್ನಾಟಕ ರಾಜ್ಯದ ಸಿವಿಲ್ ಸೇವೆ ಅಥವಾ ಕರ್ನಾಟಕ ರಾಜ್ಯದಡಿಯ ಒಂದು ಸಿವಿಲ್ ಹುದ್ದೆ ಮತ್ತು ಇದು ಸರ್ಕಾರಿ ವಲಯದ ಸಂಸ್ಥೆಯಲ್ಲಿರುವ ಒಂದು ಸೇವೆ ಅಥವಾ ಹುದ್ದೆಯನ್ನು ಒಳಗೊಳ್ಳುತ್ತದೆ.

[1][(8) "ಭರ್ತಿ ಮಾಡದ ಖಾಲಿ ಹುದ್ದೆಗಳು" ಎಂಬುದು ಈ ಮುಂದಿನ ಅರ್ಥ ಹೊಂದಿದ್ದು ಅವುಗಳನ್ನು ಒಳಗೊಳ್ಳುತ್ತದೆ,
ಎಂದರೆ:-

(i) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 19 ಎಸ್‌ಬಿಸಿ 89 ದಿನಾಂಕ: 12ನೇ ಜುಲೈ 1989 ಮತ್ತು ಸಹವಾಚಿತ ಸಮಸಂಖ್ಯೆಯ ಸರ್ಕಾರಿ ಆದೇಶ ದಿನಾಂಕ: 22ನೇ ಜುಲೈ 1989 ಇವುಗಳಲ್ಲಿ ಪರ್ಯಾಲೋಚಿಸಿರುವಂತೆ ನೇರ ನೇಮಕಾತಿಯಲ್ಲಿ ಮೀಸಲಾತಿ ಹಳೆ ಬಾಕಿ (ಬ್ಯಾಕ್‌ಲಾಗ್) ಮತ್ತು ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ಎರಡನೇ ತಿದ್ದುಪಡಿ) ಅಧಿನಿಯಮ 2004ರ (ಇಲ್ಲಿ ಇನ್ನು ಮುಂದೆ ಎರಡನೇ ತಿದ್ದುಪಡಿ ಅಧಿನಿಯಮ 2004 ಎಂದು ಉಲ್ಲೇಖಿಸಲಾಗಿದೆ) ಪ್ರಾರಂಭದ ದಿನಾಂಕದಂದು ಅಸ್ತಿತ್ವದಲ್ಲಿ ಇರುವ ಸರ್ಕಾರಿ ವಲಯದ ಸಂಸ್ಥೆಯ ಸೇವೆಯ ಅಥವಾ ಹುದ್ದೆಯ ಸಂಬಂಧದಲ್ಲಿ 4ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿನ ಮೀಸಲಾತಿ ಹಳೆ ಬಾಕಿ;

(ii) ಈ ಸಂಬಂಧವಾಗಿ ಹೊರಡಿಸಿದ ಸರ್ಕಾರಿ ಆದೇಶದ ಅನುಸಾರವಾಗಿ ಸರ್ಕಾರಿ ವಲಯ ಸಂಸ್ಥೆಗಳಲ್ಲಿ ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸುವಾಗ ನೇರ ನೇಮಕಾತಿಗೆ ಅನ್ವಯವಾಗುವ ಮೀಸಲಾತಿ ಆದೇಶಗಳಿಗೆ ಅನುಸಾರವಾಗಿ ಅಥವಾ ಸರ್ಕಾರಿ ವಲಯದ ಯಾವುದೇ ಸಂಸ್ಥೆಯಿಂದ ಹೊರಡಿಸಿದ ಯಾವುದೇ ನಿಯಮ, ಪರಿನಿಯಮ, ಉಪವಿಧಿ, ವಿನಿಯಮ ಅಥವಾ ಆದೇಶ ಮುಂತಾದವುಗಳಿಗನುಸಾರವಾಗಿ ವರ್ಗೀಕರಿಸಲಾದಂತೆ ಅನುಸೂಚಿತ ಜಾತಿಗಳು ಅಥವಾ ಸಂದರ್ಭಾನುಸಾರವಾಗಿ, ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳಿಂದ ಭರ್ತಿ ಮಾಡದಿದ್ದಷ್ಟರ ಮಟ್ಟಿಗೆ, ಎರಡನೇ ತಿದ್ದುಪಡಿ ಅಧಿನಿಯಮ 2004ರ ಪ್ರಾರಂಭದ ದಿನಾಂಕದಂದು ಅಸ್ತಿತ್ವದಲ್ಲಿರುವಂತೆ ಖಾಲಿ ಹುದ್ದೆಗಳು; ಮತ್ತು

(iii) ಮೇಲಿನ (i) ಮತ್ತು (ii)ನೇ ಖಂಡಗಳಲ್ಲಿ ನಮೂದಿಸಿದ ಭರ್ತಿಮಾಡದ ಖಾಲಿಹುದ್ದೆಗಳನ್ನು ಗಣನೆಗೆ ತೆಗೆದುಕೊಂಡ ಮೇಲೂ ಸಂವಿಧಾನದ 16ನೇ ಅನುಚ್ಛೇದದ (4)ನೇ ಖಂಡದ ಅಡಿಯಲ್ಲಿ ನೇರ ನೇಮಕಾತಿಗಳಲ್ಲಿ ಮೀಸಲಾತಿ ಆದೇಶಗಳು ಅನ್ವಯವಾಗುವ ಸರ್ಕಾರಿ ವಲಯ ಸಂಸ್ಥೆಗಳಲ್ಲಿ ಯಾವುದೇ ಸೇವೆ ಅಥವಾ ಹುದ್ದೆಗಳಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳನ್ನು ಪ್ರತಿನಿಧಿಸುವ ಶೇಕಡಾವಾರು ನೇರನೇಮಕಾತಿ ಹುದ್ದೆಗಳಲ್ಲಿ ಸಂದರ್ಭಾನುಸಾರವಾಗಿ ಅನುಸೂಚಿತ ಜಾತಿಗಳಿಗೆ ಸೇರಿದ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಶೇಕಡಾ ಹದಿನೈದು ಮತ್ತು ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಶೇಕಡಾ ಮೂರು ಮುಟ್ಟದಿದ್ದರೆ ಆಗ

ಎರಡನೇ ತಿದ್ದುಪಡಿ ಅಧಿನಿಯಮ, 2004ರ ಪ್ರಾರಂಭದ ದಿನಾಂಕದಂದು ಅಸ್ತಿತ್ವದಲ್ಲಿರುವ ಅಂಥ ಕಡಿಮೆ ಬಿದ್ದ ಭರ್ತಿ ಮಾಡದಿರುವ ನೇರನೇಮಕಾತಿ ಖಾಲಿ ಹುದ್ದೆಗಳು.][1]

1. 2004ರ ಅಧಿನಿಯಮ ಸಂಖ್ಯೆ: 8ರ ಮೂಲಕ ದಿ: 23.2.2004ರಿಂದ ಸೇರಿಸತಕ್ಕದ್ದು.

**3. ಅನ್ವಯ.-** ಈ ಅಧಿನಿಯಮದಲ್ಲಿರುವುದಾವುದೂ,-

(ಎ) ಸಂಶೋಧನೆಯನ್ನು ನಡೆಸುವ ಅಥವಾ ಅದಕ್ಕೆ ಮಾರ್ಗದರ್ಶನ ನೀಡುವ ಅಥವಾ ನಿರ್ದೇಶಿಸುವ ಸಲುವಾಗಿರುವ ಹುದ್ದೆಗಳಿಗೆ;

(ಬಿ) ವೈಜ್ಞಾನಿಕ ಹುದ್ದೆಗಳೆಂದು ವರ್ಗೀಕರಿಸಲಾಗುವ ಹುದ್ದೆಗಳಿಗೆ;

(ಸಿ) ಸಾವಧಿಕ ಹುದ್ದೆಗಳಿಗೆ;

(ಡಿ) ಯಾವುದೇ ಕರಾರಿನ ಅಧಾರದ ಮೇಲೆ ತುಂಬಲಾದ ಹುದ್ದೆಗಳಿಗೆ;

(ಇ) ಕೇಡರ್ ಹೊರಗಿನ ಹುದ್ದೆಗಳಿಗೆ;

(ಎಫ್) ವರ್ಗಾವಣೆ ಅಥವಾ ಪ್ರತಿನಿಯೋಜನೆಯ ಮೇಲೆ ತುಂಬಲಾದ ಹುದ್ದೆಗಳಿಗೆ;

(ಜಿ) ಸಂವಿಧಾನದಲ್ಲಿರುವ ಯಾವುದೇ ಉಪಬಂಧಕ್ಕನುಸಾರವಾಗಿ ನೇಮಕ ಭರ್ತಿಮಾಡಲಾಗುವ ಹುದ್ದೆಗಳಿಗೆ; ಮತ್ತು

(ಎಚ್) ರಾಜ್ಯ ಸರ್ಕಾರವು, ಆಗಿಂದಾಗ್ಗೆ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದ ಅಂಥ ಇತರ ಹುದ್ದೆಗಳಿಗೆ,

-ಅನ್ವಯಿಸತಕ್ಕದ್ದಲ್ಲ;

ಪರಂತು, (ಎಚ್) ಖಂಡದಡಿಯಲ್ಲಿ ಮಾಡಲಾದ ಪ್ರತಿಯೊಂದು ಆದೇಶವನ್ನು, ಅದನ್ನು ಮಾಡಿದ ತರುವಾಯ, ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚಿನ ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಹದಿನಾಲ್ಕು ದಿನಗಳ ಅವಧಿಯವರೆಗೆ ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು.

**4. ನೇಮಕಾತಿಗಳು ಅಥವಾ ಹುದ್ದೆಗಳ ಮೀಸಲಾತಿ ಮುಂತಾದವು.-** (1) ಗೊತ್ತುಪಡಿಸಲಾದ ದಿನಾಂಕದ ತರುವಾಯ, ಕರ್ನಾಟಕ ರಾಜ್ಯದ ಸಿವಿಲ್ ಸೇವೆಯಲ್ಲಿನ ಯಾವುದೇ ಹುದ್ದೆಗೆ ಅಥವಾ ಕರ್ನಾಟಕ ರಾಜ್ಯದಡಿಯ ಸಿವಿಲ್ ಹುದ್ದೆಗೆ ನೇಮಕಾತಿಗಳನ್ನು ಮಾಡುವಾಗ, ನೇಮಕಾತಿಗಳು ಅಥವಾ ಹುದ್ದೆಗಳನ್ನು ಭಾರತದ ಸಂವಿಧಾನದ 16ನೇ ಅನುಚ್ಛೇದದ (4)ನೇ ಖಂಡದ ಅಡಿಯಲ್ಲಿ ಸರ್ಕಾರದಿಂದ ಮಾಡಲಾದ ಆದೇಶಗಳಲ್ಲಿ ಆಗಿಂದಾಗ್ಗೆ ನಿರ್ದಿಷ್ಟಪಡಿಸಬಹುದಾದ ಅಂಥ ರೀತಿಯಲ್ಲಿ ಮತ್ತು ಅಂಥ ಪ್ರಮಾಣದಲ್ಲಿ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ ಸದಸ್ಯರಿಗೆ ಮೀಸಲಿಡತಕ್ಕದ್ದು.

[1][(1ಎ) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ನೇಮಕಾತಿ ಪ್ರಾಧಿಕಾರವು, ಎರಡನೇ ತಿದ್ದುಪಡಿ ಅಧಿನಿಯಮ, 2004ರ ಪ್ರಾರಂಭದ ದಿನಾಂಕದಂದು ಅಸ್ತಿತ್ವದಲ್ಲಿದಂತೆ ಸರ್ಕಾರಿ ವಲಯ ಸಂಸ್ಥೆಯಲ್ಲಿ ಯಾವುದೇ ಸೇವೆ ಅಥವಾ ಹುದ್ದೆಗಳಲ್ಲಿ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳಿಗೆ ಮೀಸಲಿಟ್ಟ ಭರ್ತಿ ಮಾಡದ ಹುದ್ದೆಗಳನ್ನು ಗುರುತಿಸತಕ್ಕದ್ದು ಮತ್ತು ನಿರ್ದಿಷ್ಟ ಅವಧಿಯೊಳಗೆ ಒಂದು ಸಲದ ಕ್ರಮವಾಗಿ ಅವುಗಳನ್ನು ಭರ್ತಿಮಾಡಲು ಕ್ರಮ ಕೈಗೊಳ್ಳತಕ್ಕದ್ದು. ಹುದ್ದೆಗಳ ಸಂಖ್ಯೆಯನ್ನು ಲೆಕ್ಕ ಹಾಕುವ ವಿಧಾನ, ಅಂಥ ಹುದ್ದೆಗಳನ್ನು ಭರ್ತಿಮಾಡುವ ಪ್ರಕ್ರಿಯೆ ಹಾಗೂ ಯಾವ ಅವಧಿಯೊಳಗೆ ಕ್ರಮ ಕೈಗೊಳ್ಳಬೇಕು ಎಂಬುದು ರಾಜ್ಯ ಸರ್ಕಾರವು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದಂತೆ ಇರತಕ್ಕದ್ದು:

ಪರಂತು, ಈ ಉಪ ಪ್ರಕರಣದ ಉಪಬಂಧಗಳು ಕರ್ನಾಟಕ ರಾಜ್ಯ ನಾಗರಿಕ ಸೇವೆಗಳಲ್ಲಿನ ಭರ್ತಿ ಮಾಡದ ಖಾಲಿಹುದ್ದೆಗಳಿಗೆ ಅಥವಾ ಯಾವ ಹುದ್ದೆಗಳ ಸಂಬಂಧದಲ್ಲಿ ಉಪಬಂಧಗಳನ್ನು ಈಗಾಗಲೇ ಕಲ್ಪಿಸಲಾಗಿದೆಯೋ ಆ ಹುದ್ದೆಗಳಿಗೆ ಅನ್ವಯಿಸತಕ್ಕದ್ದಲ್ಲ:

ಮತ್ತು ಪರಂತು, ಎರಡನೇ ತಿದ್ದುಪಡಿ ಅಧಿನಿಯಮ, 2004ರ ಪ್ರಾರಂಭದ ದಿನಾಂಕಕ್ಕಿಂತ ಮೊದಲು ಎಲ್ಲಾ ಭರ್ತಿಯಾಗದ ಹುದ್ದೆಗಳನ್ನು ಅಥವಾ ಅವುಗಳ ಭಾಗವನ್ನು ಈ ಉಪ ಪ್ರಕರಣದಲ್ಲಿ ಒಳಗೊಂಡಿರುವ ನೇಮಕಾತಿ ಪ್ರಾಧಿಕಾರಗಳು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗಳಿಂದ ಈಗಾಗಲೆ ಭರ್ತಿ ಮಾಡಿದ್ದರೆ ಆಗ ಅಂಥ ನೇಮಕಾತಿಗಳು ಬಾಧಿತವಾಗತಕ್ಕದ್ದಲ್ಲ.][1]

1. 2004ರ ಅಧಿನಿಯಮ ಸಂಖ್ಯೆ: 8ರ ಮೂಲಕ ದಿ: 23.2.2004ರಿಂದ ಸೇರಿಸಲಾಗಿದೆ.

(2) ಸಂವಿಧಾನದ 16ನೇ ಅನುಚ್ಛೇದದ (4)ನೇ ಖಂಡದ ಅಡಿಯಲ್ಲಿ ಮಾಡಲಾದ ಸದರಿ ಆದೇಶದ ಉಪಬಂಧಗಳನ್ನು ಈ ಅಧಿನಿಯಮದ ಅಡಿಯಲ್ಲಿ ಮಾಡಲಾದ ಒಂದು ಆದೇಶವೆಂದು ಭಾವಿಸತಕ್ಕದ್ದು ಮತ್ತು ಸರ್ಕಾರಿ ವಲಯದ ಸಂಸ್ಥೆಯ ಒಂದು ಸೇವೆ ಅಥವಾ ಹುದ್ದೆಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯಿಸತಕ್ಕದ್ದು.

(3) ನಿಯಮಿಸಬಹುದಾದ ಅಂಥ ನಿಯಮಗಳಿಗೆ ಒಳಪಟ್ಟು, ಗೊತ್ತುಪಡಿಸಲಾದ ದಿನಾಂಕದ ತರುವಾಯ, ರಾಜ್ಯ ವಿಧಾನಮಂಡಲದ ಯಾವುದೇ ಕಾನೂನಿನ ಮೂಲಕ ಅಥವಾ ಅಡಿಯಲ್ಲಿ ಸ್ಥಾಪಿತವಾದ ಅಥವಾ ಸ್ಥಾಪಿತವಾಗಿದೆಯೆಂದು ಭಾವಿಸಲಾದ ಒಂದು ವಿಶ್ವವಿದ್ಯಾನಿಲಯದಲ್ಲಿ ಅಥವಾ ರಾಜ್ಯ ಸರ್ಕಾರದಿಂದ ಸ್ಥಾಪಿತವಾದ ಅಥವಾ ನಿರ್ವಹಿಸಲಾದ ಅಥವಾ ಅನುದಾನ ಪಡೆದ ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಂಗ ಕ್ರಮಕ್ಕೆ ಪ್ರವೇಶಾವಕಾಶವನ್ನು ನೀಡುವಾಗ ನಿಯಮಿಸಬಹುದಾದ ಅಂಥ ಪ್ರಮಾಣದಲ್ಲಿ ಮತ್ತು ಅಂಥ ರೀತಿಯಲ್ಲಿ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗೆ ಮೀಸಲಾತಿಯನ್ನು ಮಾಡತಕ್ಕದ್ದು.

(4) ಈ ಪ್ರಕರಣದ ಉಪಬಂಧಗಳ ಉಲ್ಲಂಘನೆಯಲ್ಲಿ ಮಾಡಲಾದ ಎಲ್ಲ ನೇಮಕಾತಿಗಳು ಶೂನ್ಯಗೊಳಿಸಬಹುದಾದಂಥವುಗಳಾಗಿರತಕ್ಕದ್ದು.

[1][**4ಎ. ಜಾತಿ ಪ್ರಮಾಣ ಪತ್ರ ಮತ್ತು ಆದಾಯ ಮತ್ತು ಜಾತಿ ಪ್ರಮಾಣ ಪತ್ರಗಳ ನೀಡಿಕೆ.**-(1) ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಯಾವನೇ ಅಭ್ಯರ್ಥಿ ಅಥವಾ ಅವನ ತಂದೆ, ತಾಯಿ ಅಥವಾ ಪೋಷಕರು ಯಾವುದೇ ಸೇವೆಯಲ್ಲಿ ಅಥವಾ ಹುದ್ದೆಯಲ್ಲಿ ಅಥವಾ ಒಂದು ವಿಶ್ವವಿದ್ಯಾನಿಲಯದಲ್ಲಿ ಅಥವಾ ಯಾವುದೇ ಶಿಕ್ಷಣ ಸಂಸ್ಥೆಯಲ್ಲಿನ ವ್ಯಾಸಂಗ ಕ್ರಮದ ಪ್ರವೇಶಕ್ಕಾಗಿ 4ನೇ ಪ್ರಕರಣದ ಅಡಿಯಲ್ಲಿ ಮೀಸಲಾತಿ ಪ್ರಯೋಜನವನ್ನು ಕ್ಲೇಮು ಮಾಡಲು ಜಾತಿ ಪ್ರಮಾಣ ಪತ್ರದ ನೀಡಿಕೆಗಾಗಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ತಹಶೀಲ್ದಾರನಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

(2) ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಯಾರೇ ಅಭ್ಯರ್ಥಿಯು ಅಥವಾ ಅವನ ತಂದೆ, ತಾಯಿ ಅಥವಾ ಪೋಷಕರು, ಯಾವುದೇ ಸೇವೆ ಅಥವಾ ಹುದ್ದೆಯಲ್ಲಿನ ನೇಮಕಾತಿ ಅಥವಾ ವಿಶ್ವವಿದ್ಯಾನಿಲಯದ ಅಥವಾ ಯಾವುದೇ ಶಿಕ್ಷಣ ಸಂಸ್ಥೆಯಲ್ಲಿನ ವ್ಯಾಸಂಗಕ್ರಮದ ಪ್ರವೇಶಕ್ಕಾಗಿ 4ನೇ ಪ್ರಕರಣದ ಅಡಿಯಲ್ಲಿ ಮೀಸಲಾತಿ ಪ್ರಯೋಜನವನ್ನು ಕ್ಲೇಮು ಮಾಡಲು ಆದಾಯ ಮತ್ತು ಜಾತಿ ಪ್ರಮಾಣ ಪತ್ರದ ನೀಡಿಕೆಗಾಗಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ತಹಶೀಲ್ದಾರನಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

(3) ತಹಶೀಲ್ದಾರನು (1) ಅಥವಾ (2)ನೇ ಉಪ-ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸ್ವೀಕರಿಸಿದ ತರುವಾಯ ಮತ್ತು ತಾನು ಯುಕ್ತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ನಂತರ ಮತ್ತು ಅರ್ಜಿದಾರನು ಮಾಡಿದ ಕ್ಲೇಮಿನ ಯಥಾರ್ಥತೆಯ ಬಗ್ಗೆ ಅವನಿಗೆ ಮನವರಿಕೆಯಾದರೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಜಾತಿ ಪ್ರಮಾಣ ಪತ್ರವನ್ನು ಅಥವಾ ಸಂದರ್ಭಾನುಸಾರ ಆದಾಯ ಮತ್ತು ಜಾತಿ ಪ್ರಮಾಣ ಪತ್ರವನ್ನು ನೀಡುವ ಅಥವಾ ಅರ್ಜಿಯನ್ನು ತಿರಸ್ಕರಿಸುವ ಆದೇಶವನ್ನು ಹೊರಡಿಸತಕ್ಕದ್ದು .

(4) ತಹಶೀಲ್ದಾರನು (3)ನೇ ಉಪ-ಪ್ರಕರಣದ ಅಡಿಯಲ್ಲಿ ಆದೇಶವನ್ನು ಹೊರಡಿಸುವುದಕ್ಕೆ ಮೊದಲು ನಿಯಮಿಸಬಹುದಾದಂಥ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು.

(5) ಅಭ್ಯರ್ಥಿ ಅಥವಾ ಅವನ ತಂದೆ, ತಾಯಿ ಅಥವಾ ಪೋಷಕರು ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದವರೆಂಬುದನ್ನು ರುಜುವಾತು ಪಡಿಸುವುದು ಅರ್ಜಿದಾರನ ಹೊಣೆಯಾಗಿರತಕ್ಕದ್ದು.

**4ಬಿ. 4ಎ ಪ್ರಕರಣದ ಅಡಿಯಲ್ಲಿನ ಆದೇಶದ ವಿರುದ್ಧ ಅಪೀಲು.**- (1) 4ಎ ಪ್ರಕರಣದ ಅಡಿಯಲ್ಲಿ ತಹಶೀಲ್ದಾರನ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಕಂದಾಯ ಉಪವಿಭಾಗದ ಅಸಿಸ್ಟೆಂಟ್ ಕಮೀಷನರ್‌ಗೆ ಅಪೀಲು ಸಲ್ಲಿಸತಕ್ಕದ್ದು.

(2) ಕಂದಾಯ ಉಪ-ವಿಭಾಗದ ಅಸಿಸ್ಟೆಂಟ್ ಕಮೀಷನರನು ಉಭಯ ಪಕ್ಷದವರಿಗೆ ಅಹವಾಲು ಹೇಳಿಕೊಳ್ಳಲು ಅವಕಾಶ ಕೊಟ್ಟನಂತರ ಅಪೀಲನ್ನು ಪುರಸ್ಕರಿಸುವ ಅಥವಾ ರದ್ದುಪಡಿಸುವ ಮತ್ತು ಯುಕ್ತ ಪ್ರಕರಣಗಳಲ್ಲಿ ಅರ್ಜಿದಾರನಿಗೆ ಜಾತಿ ಪ್ರಮಾಣ ಪತ್ರವನ್ನು, ಅಥವಾ ಸಂದರ್ಭಾನುಸಾರ ಆದಾಯ ಮತ್ತು ಜಾತಿ ಪ್ರಮಾಣ ಪತ್ರವನ್ನು ನೀಡುವಂತೆ ನಿರ್ದೇಶಿಸಿ ಆದೇಶಗಳನ್ನು ಹೊರಡಿಸಬಹುದು.

**4ಸಿ. ಜಾತಿ ಪ್ರಮಾಣ ಪತ್ರ ಮತ್ತು ಆದಾಯ ಮತ್ತು ಜಾತಿ ಪ್ರಮಾಣ ಪತ್ರದ ಪರಿಶೀಲನೆ.-** (1) ರಾಜ್ಯ ಸರ್ಕಾರವು 4ಎ ಪ್ರಕರಣದ ಅಥವಾ 4ಬಿ ಪ್ರಕರಣದ ಅಡಿಯಲ್ಲಿ ನೀಡಲಾದ ಜಾತಿ ಪ್ರಮಾಣದ ಪತ್ರ ಮತ್ತು ಆದಾಯ ಮತ್ತು ಜಾತಿ ಪ್ರಮಾಣ ಪತ್ರದ ಪರಿಶೀಲನೆಗಾಗಿ ನಿಯಮಿಸಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳನ್ನು ಒಳಗೊಂಡ ಒಂದು ಅಥವಾ ಹೆಚ್ಚು ಪರಿಶೀಲನಾ ಸಮಿತಿಗಳನ್ನು ಪ್ರತಿಯೊಂದು ಜಿಲ್ಲೆಗೂ ರಚಿಸತಕ್ಕದ್ದು.

(2) 4ಎ ಅಥವಾ 4ಬಿ ಪ್ರಕರಣದ ಅಡಿಯಲ್ಲಿ ಜಾತಿ ಪ್ರಮಾಣ ಪತ್ರ ಅಥವಾ ಆದಾಯ ಮತ್ತು ಜಾತಿ ಪ್ರಮಾಣ ಪತ್ರವನ್ನು ಪಡೆದುಕೊಂಡ ಯಾವನೇ ವ್ಯಕ್ತಿಯು ಅಥವಾ ನೇಮಕಾತಿ ಪ್ರಾಧಿಕಾರಿ ಅಥವಾ ವಿಶ್ವವಿದ್ಯಾನಿಲಯದಲ್ಲಿ ಅಥವಾ ಯಾವುದೇ ಶಿಕ್ಷಣ ಸಂಸ್ಥೆಯಲ್ಲಿನ ವ್ಯಾಸಂಗಕ್ರಮಕ್ಕೆ ಪ್ರವೇಶಾವಕಾಶ ನೀಡುವ ಇತರ ಯಾವನೇ ಪ್ರಾಧಿಕಾರಿಯು, ಪರಿಶೀಲನಾ ಸಮಿತಿಗೆ ಸಿಂಧುತ್ವ ಪ್ರಮಾಣ ಪತ್ರದ ನೀಡಿಕೆಗಾಗಿ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು.

(3) ಪರಿಶೀಲನಾ ಸಮಿತಿಯು ಅರ್ಜಿಯ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಅದು ಉಚಿತವೆಂದು ಭಾವಿಸುವಂಥ ವಿಚಾರಣೆಯನ್ನು ನಡೆಸಿದ ನಂತರ ನಿಯಮಿಸಬಹುದಾದಂಥ ನಮೂನೆಯಲ್ಲಿ ಸಿಂಧುತ್ವ ಪ್ರಮಾಣ ಪತ್ರವನ್ನು ನೀಡಬಹುದು ಅಥವಾ ಅರ್ಜಿಯನ್ನು ತಿರಸ್ಕರಿಸಬಹುದು.][1]

1. 1997ರ ಅಧಿನಿಯಮ ಸಂಖ್ಯೆ: 27ರ ಮೂಲಕ ದಿ: 8.2.2000ದಿಂದ ಸೇರಿಸಲಾಗಿದೆ.

[1][**4ಡಿ. ಅಪೀಲು:-** (1) 4ಸಿ ಪ್ರಕರಣದ ಅಡಿಯಲ್ಲಿ ಪರಿಶೀಲನಾ ಸಮಿತಿಯು ಹೊರಡಿಸಿದ ಆದೇಶದಿಂದ ಬಾಧಿತನಾದ ಯಾವೊಬ್ಬ ವ್ಯಕ್ತಿಯು, ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ,-

(ಎ) ಪರಿಶೀಲನಾ ಪ್ರಮಾಣ ಪತ್ರವು ಅನುಸೂಚಿತ ಜಾತಿಗಳಿಗೆ ಸೇರಿದ ವ್ಯಕ್ತಿಗೆ ಸಂಬಂಧಿಸಿದ್ದ ಸಂದರ್ಭದಲ್ಲಿ ಸಮಾಜ ಕಲ್ಯಾಣ ಆಯುಕ್ತರು / ನಿರ್ದೇಶಕರಿಗೆ;

(ಬಿ) ಪರಿಶೀಲನಾ ಪ್ರಮಾಣ ಪತ್ರವು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ವ್ಯಕ್ತಿಗೆ ಸಂಬಂಧಿಸಿದ್ದ ಸಂದರ್ಭದಲ್ಲಿ
ಬುಡಕಟ್ಟು ಕಲ್ಯಾಣ ನಿರ್ದೇಶಕರಿಗೆ;

(ಸಿ) ಪರಿಶೀಲನಾ ಪ್ರಮಾಣ ಪತ್ರವು ಇತರ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗೆ ಸಂಬಂಧಿಸಿದ್ದ ಸಂದರ್ಭದಲ್ಲಿ ಹಿಂದುಳಿದ ವರ್ಗಗಳ ಇಲಾಖೆಯ ನಿರ್ದೇಶಕರಿಗೆ,

– ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ವಿಧಾನದಲ್ಲಿ ಹಾಗೂ ಅಂಥ ಶುಲ್ಕದ ಸಂದಾಯದೊಡನೆ ಅಪೀಲನ್ನು ಸಲ್ಲಿಸಬಹುದು.

(2) ಅಪೀಲು ಪ್ರಾಧಿಕಾರವು ಉಭಯ ಪಕ್ಷಕಾರರಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಟ್ಟ
ತರುವಾಯ ತಾನು ಸೂಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಹೊರಡಿಸತಕ್ಕದ್ದು.

(3) [2][xxx ][2]][1]

1. 2004ರ ಅಧಿನಿಯಮ ಸಂಖ್ಯೆ: 8ರ ಮೂಲಕ ದಿ: 23.2.2004ರಿಂದ ಪ್ರತಿಯೋಜಿಸಲಾಗಿದೆ.

2. 2007ರ ಅಧಿನಿಯಮ ಸಂಖ್ಯೆ: 17ರ ಮೂಲಕ ದಿ: 5.1.2007ರಿಂದ ಬಿಟ್ಟುಬಿಡಲಾಗಿದೆ.

[1][4ಇ. **ತಹಶೀಲ್ದಾರನು ಮತ್ತು ಪರಿಶೀಲನಾ ಸಮಿತಿಯು ಸಿವಿಲ್ ನ್ಯಾಯಾಲಯದ ಅಧಿಕಾರಗಳನ್ನು ಚಲಾಯಿಸುವುದು.–** ತಹಶೀಲ್ದಾರನು ಮತ್ತು ಪರಿಶೀಲನಾ ಸಮಿತಿಯು, ಈ ಅಧಿನಿಯಮದ ಅಡಿಯಲ್ಲಿ ವಿಚಾರಣೆ ನಡೆಸುವಾಗ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ ಕೇಂದ್ರ ಅಧಿನಿಯಮ ಸಂಖ್ಯೆ:5) ಅಡಿಯಲ್ಲಿ ವಿಶೇಷವಾಗಿ ಈ ಮುಂದಿನ ವಿಷಯಗಳಿಗೆ ಸಂಬಂಧಪಟ್ಟಂತೆ ದಾವೆಯ ವಿಚಾರಣೆಯ ಅವಧಿಯಲ್ಲಿ ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ :–

(ಎ) ಯಾವೊಬ್ಬ ವ್ಯಕ್ತಿಯನ್ನು ಸಮನು ಮಾಡುವುದು ಮತ್ತು ಹಾಜರಾತಿಯನ್ನು ಒತ್ತಾಯಪಡಿಸುವುದು ಮತ್ತು ಪ್ರಮಾಣದ ಮೇಲೆ ಆತನನ್ನು ಪರೀಕ್ಷಿಸುವುದು;

(ಬಿ) ಯಾವುದೇ ದಾಖಲೆಯನ್ನು ಶೋಧಿಸುವುದು ಮತ್ತು ಹಾಜರುಪಡಿಸುವುದು;

(ಸಿ) ಅಫಿದಾವಿತ್ತುಗಳ ಮೇಲೆ ಸಾಕ್ಷ್ಯಗಳನ್ನು ಸ್ವೀಕರಿಸುವುದು;

(ಡಿ) ಯಾವುದೇ ನ್ಯಾಯಾಲಯ ಅಥವಾ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆ ಅಥವಾ ಅದರ ನಕಲನ್ನು ಕಡ್ಡಾಯವಾಗಿ ಕೋರುವುದು;

(ಇ) ಸಾಕ್ಷಿಗಳನ್ನು ಅಥವಾ ದಾಖಲೆಗಳನ್ನು ಪರೀಕ್ಷಿಸುವುದಕ್ಕಾಗಿ ಕಮೀಷನ್‌ಗಳನ್ನು ಹೊರಡಿಸುವುದು; ಮತ್ತು

(ಎಫ್) ನಿಯಮಿಸಬಹುದಾದಂಥ ಯಾವುದೇ ಇತರ ವಿಷಯ.

**4ಎಫ್. ಡೆಪ್ಯೂಟಿ ಕಮೀಷನರ್‌ರಿಂದ ಪುನರೀಕ್ಷಣೆ.–** (1) ಡೆಪ್ಯೂಟಿ ಕಮೀಷನರನು, ಯಾವುದೇ ಸಮಯದಲ್ಲಿ ತಾನಾಗಿಯೇ ಆಗಲಿ ಅಥವಾ ನಿಯಮಿಸಲಾದ ಅವಧಿಯಲ್ಲಿ ತನಗೆ ಮಾಡಲಾದ ಅರ್ಜಿಯ ಮೇಲಾಗಲಿ, 4ಎ ಪ್ರಕರಣದ ಅಡಿಯಲ್ಲಿ ತಹಶೀಲ್ದಾರನು ಅಥವಾ 4ಬಿ ಪ್ರಕರಣದ ಅಡಿಯಲ್ಲಿ ಅಸಿಸ್ಟೆಂಟ್ ಕಮೀಷನರನು ಕೈಗೊಂಡ ಯಾವುದೇ ತೀರ್ಮಾನ ಅಥವಾ ಹೊರಡಿಸಿದ ಆದೇಶದ ಸಂಬಂಧದಲ್ಲಿ ಅಂಥ ತೀರ್ಮಾನ ಅಥವಾ ಆದೇಶದ ಕಾನೂನು ಸಮ್ಮತತೆ, ಔಚಿತ್ಯದ ಬಗ್ಗೆ ತನಗೆ ಮನವರಿಕೆಯಾಗುವ ಉದ್ದೇಶಕ್ಕಾಗಿ ದಾಖಲೆಗಳನ್ನು ತರಿಸಬಹುದು ಮತ್ತು ಪರೀಕ್ಷಿಸಬಹುದು ಮತ್ತು ಯಾವುದೇ ಪ್ರಕರಣದಲ್ಲಿ

ಯಾವುದೇ ಅಂಥ ತೀರ್ಮಾನ ಅಥವಾ ಆದೇಶವನ್ನು ಪರಿವರ್ತಿಸತಕ್ಕದ್ದು, ರದ್ದುಗೊಳಿಸತಕ್ಕದ್ದು, ಪರಿಷ್ಕರಿಸತಕ್ಕದ್ದು ಅಥವಾ ಪುನರ್ ಪರಿಗಣನೆಗಾಗಿ ಮುಂಡಿಸತಕ್ಕದ್ದು ಎಂದು ಡೆಪ್ಯೂಟಿ ಕಮೀಷನರನಿಗೆ ಕಂಡುಬಂದರೆ, ಆತನು ತದನುಸಾರವಾಗಿ ಆದೇಶಗಳನ್ನು ಮೂವತ್ತು ದಿನಗಳೊಳಗಾಗಿ ಹೊರಡಿಸಬಹುದು:

ಪರಂತು, ಡೆಪ್ಯೂಟಿ ಕಮೀಷನರನು ಯಾವೊಬ್ಬ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡಿದ ಹೊರತು, ಅಂಥ ವ್ಯಕ್ತಿಗೆ ಪ್ರತಿಕೂಲಕರವಾದ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(2) ಡೆಪ್ಯೂಟಿ ಕಮೀಷನರನು, (1)ನೇ ಉಪ ಪ್ರಕರಣದ ಅಡಿಯಲ್ಲಿನ ತನ್ನ ಅಧಿಕಾರಗಳನ್ನು ಚಲಾಯಿಸುವುದನ್ನು ಕಾಯ್ದಿರಿಸಿ, ಅಂಥ ಯಾವುದೇ ತೀರ್ಮಾನ ಅಥವಾ ಆದೇಶದ ಜಾರಿಯನ್ನು ತಡೆಹಿಡಿಯಬಹುದು.][1]

1. 2012ರ ಅಧಿನಿಯಮ ಸಂಖ್ಯೆ: 7ರ ಮೂಲಕ ಅಧಿಸೂಚನೆ ಸಂಖ್ಯೆ ಸಕಇ 49 ಬಿಸಿಎ 2012, ಬೆಂಗಳೂರು ದಿ: 22.06.2012ರಿಂದ ಜಾರಿಗೆ ಬಂದಿವೆ.

**5. ದಂಡ.–** ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳನ್ನು ಉಲ್ಲಂಘಿಸಿ, ಯಾವೊಬ್ಬ ನೇಮಕಾತಿ ಪ್ರಾಧಿಕಾರಿಯು ನೇಮಕ ಮಾಡಿದರೆ ಅಥವಾ ವಿಶ್ವವಿದ್ಯಾನಿಲಯದಲ್ಲಿ ಅಥವಾ ಶಿಕ್ಷಣ ಸಂಸ್ಥೆಯಲ್ಲಿ ಯಾವುದೇ ವ್ಯಾಸಂಗ ಕ್ರಮಕ್ಕೆ ಪ್ರವೇಶಾವಕಾಶ ನೀಡುವ ಯಾವೊಬ್ಬ ಪ್ರಾಧಿಕಾರಿಯು ಅಂಥ ಪ್ರವೇಶಾವಕಾಶ ನೀಡಿದರೆ, ಅವನು ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು:

ಪರಂತು, ಈ ಪ್ರಕರಣದಲ್ಲಿರುವುದಾವುದೂ ರಾಜ್ಯಪಾಲರು ನೇಮಕಾತಿ ಪ್ರಾಧಿಕಾರಿಯಾಗಿರುವ ಯಾವುದೇ ಸೇವೆ ಅಥವಾ ಹುದ್ದೆಗೆ ನೇಮಕ ಮಾಡಿಕೊಳ್ಳುವ ಸಂಬಂಧದಲ್ಲಿ ಅನ್ವಯಿಸತಕ್ಕದ್ದಲ್ಲ.

[1][**5ಎ. ಸುಳ್ಳು ಜಾತಿ ಪ್ರಮಾಣ ಪತ್ರ ಅಥವಾ ಆದಾಯ ಮತ್ತು ಜಾತಿ ಪ್ರಮಾಣ ಪತ್ರ ಪಡೆದಿದ್ದಕ್ಕಾಗಿ ದಂಡಗಳು.–** ಯಾವೊಬ್ಬ ವ್ಯಕ್ತಿಯು,–

(ಎ) ಸುಳ್ಳು ಮಾಹಿತಿಯನ್ನು ಒದಗಿಸಿ ; ಅಥವಾ

(ಬಿ) ಸುಳ್ಳು ಹೇಳಿಕೆಯನ್ನು ನೀಡಿ ; ಅಥವಾ

(ಸಿ) ಯಾವುದೇ ಇತರ ಮೋಸದ ವಿಧಾನಗಳಿಂದ,

– ಜಾತಿ ಪ್ರಮಾಣಪತ್ರವನ್ನು ಅಥವಾ ಆದಾಯ ಮತ್ತು ಜಾತಿ ಪ್ರಮಾಣ ಪತ್ರವನ್ನು ಪಡೆದಿದ್ದರೆ, ಅಪರಾಧ ನಿರ್ಣಯವಾದ ತರುವಾಯ, ಆತನು ಆರು ತಿಂಗಳಿಗೆ ಕಡಿಮೆಯಲ್ಲದ, ಆದರೆ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಠಿಣ

ಕಾರಾವಾಸದಿಂದ ಮತ್ತು ಒಂದು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ, ಆದರೆ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು:

ಪರಂತು, ನ್ಯಾಯಾಲಯವು, ಸಾಕಷ್ಟು ಮತ್ತು ವಿಶೇಷ ಕಾರಣಗಳನ್ನು ದಾಖಲು ಮಾಡಿ, ಕಡಿಮೆ ಅವಧಿಯ ಕಾರಾವಾಸ ಶಿಕ್ಷೆಯನ್ನು ಅಥವಾ ಕಡಿಮೆ ಜುಲ್ಮಾನೆಯನ್ನು ವಿಧಿಸಬಹುದು.

**5ಬಿ. ಸುಳ್ಳು ಜಾತಿ ಪ್ರಮಾಣ ಪತ್ರ ಅಥವಾ ಆದಾಯ ಮತ್ತು ಜಾತಿ ಪ್ರಮಾಣ ಪತ್ರ ನೀಡಿದ್ದಕ್ಕಾಗಿ ದಂಡ.–** ತಹಶೀಲ್ದಾರನು ಉದ್ದೇಶಪೂರ್ವಕವಾಗಿ ಸುಳ್ಳು ಜಾತಿ ಪ್ರಮಾಣ ಪತ್ರ ಅಥವಾ ಆದಾಯ ಮತ್ತು ಜಾತಿ ಪ್ರಮಾಣ ಪತ್ರವನ್ನು ನೀಡಿದ್ದರೆ, ಅಪರಾಧ ನಿರ್ಣಯವಾದ ತರುವಾಯ, ಆತನು ಆರು ತಿಂಗಳಿಗೆ ಕಡಿಮೆಯಲ್ಲದ ಆದರೆ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಠಿಣ ಕಾರಾವಾಸದಿಂದ ಮತ್ತು ಒಂದು ಸಾವಿರ ರೂಪಾಯಿಗಳಿಗೆ ಕಡಿಮೆಯಲ್ಲದ ಆದರೆ ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು :

ಪರಂತು, ನ್ಯಾಯಾಲಯವು ಸಾಕಷ್ಟು ಮತ್ತು ವಿಶೇಷ ಕಾರಣಗಳನ್ನು ದಾಖಲ್ಮಾಡಿ ಕಡಿಮೆ ಅವಧಿಯ ಕಾರಾವಾಸ ಶಿಕ್ಷೆಯನ್ನು ಅಥವಾ ಕಡಿಮೆ ಜುಲ್ಮಾನೆಯನ್ನು ವಿಧಿಸಬಹುದು.][1]

1. 2012ರ ಅಧಿನಿಯಮ ಸಂಖ್ಯೆ: 7ರ ಮೂಲಕ ಅಧಿಸೂಚನೆ ಸಂಖ್ಯೆ ಸಕಇ 49 ಬಿಸಿಎ 2012, ಬೆಂಗಳೂರು ದಿ: 22.06.2012ರಿಂದ ಜಾರಿಗೆ ಬಂದಿವೆ.

**6. ಅಪರಾಧಗಳ ಸಂಜ್ಞಾನ.–** ಈ ಅಧಿನಿಯಮದ ಅಡಿಯಲ್ಲಿ ಒಂದು ಅಪರಾಧಕ್ಕಾಗಿ ಯಾವುದೇ ಅಭಿಯೋಜನೆಯನ್ನು, ರಾಜ್ಯ ಸರ್ಕಾರದಿಂದಲ್ಲದೆ ಅಥವಾ ರಾಜ್ಯ ಸರ್ಕಾರದ ಮಂಜೂರಾತಿಯಿಲ್ಲದೆ, ಹೂಡತಕ್ಕದ್ದಲ್ಲ.

[1][**6ಎ. ದುಷ್ಪ್ರೇರಕರಿಗೆ ದಂಡನೆ.–** ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧಕ್ಕೆ ದುಷ್ಪ್ರೇರಿಸುವ ಯಾವೊಬ್ಬ ವ್ಯಕ್ತಿಯು, ಈ ಅಧಿನಿಯಮದಲ್ಲಿ ಅಂಥ ಅಪರಾಧಕ್ಕಾಗಿ ಉಪಬಂಧಿಸಿದ ದಂಡನೆಯಿಂದ ದಂಡಿತನಾಗತಕ್ಕದ್ದು.

**6ಬಿ. ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ.–** ಈ ಅಧಿನಿಯಮದ ಅಡಿಯಲ್ಲಿ ಯಾವೊಬ್ಬ ಅಧಿಕಾರಿಯು ಅಥವಾ ಪ್ರಾಧಿಕಾರವು ಹೊರಡಿಸಿದ ಯಾವುದೇ ಆದೇಶದ ಸಂಬಂಧದಲ್ಲಿ ಯಾವುದೇ ಸಿವಿಲ್ ನ್ಯಾಯಾಲಯವು ತನ್ನ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ ಮತ್ತು ಈ ಅಧಿನಿಯಮದ ಅಡಿಯಲ್ಲಿ ಮತ್ತು ಅಧಿನಿಯಮದಿಂದ ಪ್ರದತ್ತವಾದ ಯಾವುದೇ ಅಧಿಕಾರದ ಅನುಸರಣೆಯಲ್ಲಿ, ಅಂಥ ಅಧಿಕಾರಿ ಅಥವಾ ಪ್ರಾಧಿಕಾರವು ಈ ಅಧಿನಿಯಮದ ಅಡಿಯಲ್ಲಿ ಕೈಗೊಂಡ ಅಥವಾ ಕೈಗೊಳ್ಳುವ ಯಾವುದೇ ಕ್ರಮದ ಸಂಬಂಧದಲ್ಲಿ ನ್ಯಾಯಾಲಯವು ಯಾವುದೇ ತಡೆ ಅಥವಾ ನಿರ್ಬಂಧಕಾಜ್ಞೆಯನ್ನು ನೀಡತಕ್ಕದ್ದಲ್ಲ.

**6ಸಿ. ಪದವಿ ಮುಂತಾದವುಗಳ ರದ್ದತಿ.–** ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಯಾವೊಬ್ಬ ವ್ಯಕ್ತಿಯು ಸುಳ್ಳು ಜಾತಿ ಪ್ರಮಾಣ ಪತ್ರ ಅಥವಾ ಸಂದರ್ಭಾನುಸಾರ ಸುಳ್ಳು ಆದಾಯ ಮತ್ತು ಜಾತಿ ಪ್ರಮಾಣ ಪತ್ರದ ಆಧಾರದ ಮೇಲೆ ಯಾವುದೇ ಶಿಕ್ಷಣ ಸಂಸ್ಥೆಯಲ್ಲಿ ಪ್ರವೇಶವನ್ನು ಪಡೆದ ತರುವಾಯ ಆರ್ಜಿಸಿದ ಯಾವುದೇ ಪದವಿ, ಡಿಪ್ಲೊಮೊ ಅಥವಾ ಇತರ ಯಾವುದೇ ವಿದ್ಯಾರ್ಹತೆಯನ್ನು, ಆತನು ಪಡೆದ ಜಾತಿ ಪ್ರಮಾಣ ಪತ್ರ ಅಥವಾ ಸಂದರ್ಭಾನುಸಾರ, ಆದಾಯ ಮತ್ತು ಜಾತಿ ಪ್ರಮಾಣ ಪತ್ರದ ರದ್ದತಿಯ ತರುವಾಯ, ಹಿಂದಕ್ಕೆ ಪಡೆಯತಕ್ಕದ್ದು.

**6ಡಿ. ಅಧಿನಿಯಮವು ಇತರ ಕಾನೂನುಗಳ ಮೇಲೆ ಅಧ್ಯಾರೋಹಿ ಪರಿಣಾಮ ಹೊಂದಿರುವುದು.–** ಈ ಅಧಿನಿಯಮದ ಉಪಬಂಧಗಳು, ಪ್ರಸ್ತುತ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಅಸಂಗತವಾಗಿರುವುದು ಏನೇ ಇದ್ದರೂ ಪರಿಣಾಮಕಾರಿಯಾಗಿರತಕ್ಕದ್ದು.

**6ಇ. ಅಧಿನಿಯಮವು, ಯಾವುದೇ ನ್ಯಾಯಾಲಯಗಳಲ್ಲಿ ನಿರ್ಧಾರವಾದ ನಿರ್ದಿಷ್ಟ ಪ್ರಕರಣಗಳ ಅನ್ವಯತೆ ಮೇಲೆ ಅಧ್ಯಾರೋಹಿ ಪರಿಣಾಮ ಹೊಂದಿರುವುದು.–** ಈ ಅಧಿನಿಯಮದ ಉಪಬಂಧಗಳು, ಯಾವುದೇ ನ್ಯಾಯಾಲಯಗಳಿಂದ ನಿರ್ಧಾರವಾದ ಯಾವುದೇ ಪ್ರಕರಣಗಳಲ್ಲಿ ಏನೇ ಇದ್ದರೂ, ಪರಿಣಾಮಕಾರಿಯಾಗಿರತಕ್ಕದ್ದು.][1]

1. 2012ರ ಅಧಿನಿಯಮ ಸಂಖ್ಯೆ: 7ರ ಮೂಲಕ ಅಧಿಸೂಚನೆ ಸಂಖ್ಯೆ ಸಕಇ 49 ಬಿಸಿಎ 2012, ಬೆಂಗಳೂರು ದಿ: 22.06.2012ರಿಂದ ಜಾರಿಗೆ ಬಂದಿವೆ.

**7. ದಾಖಲೆಗಳ ನಿರ್ವಹಣೆ ಮತ್ತು ವಾರ್ಷಿಕ ವರದಿಯ ಸಲ್ಲಿಸುವಿಕೆ ಮುಂತಾದವುಗಳು.–** (1) ಪ್ರತಿಯೊಬ್ಬ ನೇಮಕಾತಿ ಪ್ರಾಧಿಕಾರಿ ಮತ್ತು ಒಂದು ವಿಶ್ವವಿದ್ಯಾನಿಲಯ ಅಥವಾ ಸರ್ಕಾರಿ ವಲಯದಲ್ಲಿ ಸ್ಥಾಪನೆ ಇರುವ ಒಂದು ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಂಗ ಕ್ರಮಕ್ಕಾಗಿ ಪ್ರವೇಶಾವಕಾಶ ನೀಡುವ ಪ್ರತಿಯೊಬ್ಬ ಪ್ರಾಧಿಕಾರಿಯು ನಿಯಮಿಸಬಹುದಾದ ಅಂಥ ಪ್ರಪತ್ರದಲ್ಲಿ ಮತ್ತು ಅಂಥ ರೀತಿಯಲ್ಲಿ ಅಂಥ ದಾಖಲೆಗಳನ್ನು ಇಡತಕ್ಕದ್ದು ಮತ್ತು ವಾರ್ಷಿಕ ವರದಿಯನ್ನು ರಾಜ್ಯ ಸರ್ಕಾರಕ್ಕೆ ಒದಗಿಸತಕ್ಕದ್ದು.

(2) ಈ ಅಧಿನಿಯಮದ ಉಪಬಂಧಗಳು ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳು ಸರಿಯಾದ ರೀತಿಯಲ್ಲಿ ಕಾರ್ಯಗತವಾಗುತ್ತಿವೆ ಎಂಬುದನ್ನು ಖಚಿತ ಪಡಿಸಿಕೊಳ್ಳುವ ಉದ್ದೇಶಕ್ಕಾಗಿ (1)ನೇ ಉಪಪ್ರಕರಣದ ಅಡಿಯಲ್ಲಿ ನಿರ್ವಹಿಸುವಂತೆ ಅಗತ್ಯಪಡಿಸಲಾದ ಪ್ರಾಧಿಕಾರಿಯ ದಾಖಲೆಗಳನ್ನು, ಈ ಪರವಾಗಿ ರಾಜ್ಯ ಸರ್ಕಾರದಿಂದ ಪ್ರಾಧಿಕೃತನಾದ ಯಾವೊಬ್ಬ ಅಧಿಕಾರಿಯು ಪರೀಕ್ಷಿಸಬಹುದು.

(3) ಮೇಲ್ಕಂಡ ಉದ್ದೇಶಕ್ಕೆ ಅಗತ್ಯವಿರಬಹುದಾದ ಅಂಥ ದಾಖಲೆಗಳನ್ನು ಮತ್ತು ದಸ್ತಾವೇಜುಗಳನ್ನು ಹಾಜರುಪಡಿಸುವುದು, ಅಂಥ ಮಾಹಿತಿಗಳನ್ನು ಒದಗಿಸುವುದು ಮತ್ತು ಎಲ್ಲ ಅಂಥ ಸಹಾಯ ಮತ್ತು ಸೌಲಭ್ಯಗಳನ್ನು ನೀಡುವುದು, ಸಂಬಂಧಪಟ್ಟ ನೇಮಕಾತಿ

ಪ್ರಾಧಿಕಾರಿ ಅಥವಾ ವಿಶ್ವವಿದ್ಯಾನಿಲಯಕ್ಕೆ ಅಥವಾ ಶಿಕ್ಷಣ ಸಂಸ್ಥೆಗೆ ಪ್ರವೇಶಾವಕಾಶ ನೀಡುವ ಪ್ರಾಧಿಕಾರಿಯ ಕರ್ತವ್ಯವಾಗಿರತಕ್ಕದ್ದು.

**8. ಸ್ಥಾಯಿ ಸಮಿತಿಯ ರಚನೆ.-** ಈ ಮುಂದಿನ ಸದಸ್ಯರನ್ನೊಳಗೊಂಡ ಒಂದು ಸ್ಥಾಯಿ ಸಮಿತಿ ಇರತಕ್ಕದ್ದು, ಎಂದರೆ:-

(ಎ) ಸಮಾಜ ಕಲ್ಯಾಣ ಸಚಿವರು,
ಕರ್ನಾಟಕ ಸರ್ಕಾರ .. ಅಧ್ಯಕ್ಷರು

(ಬಿ) (i) ಸಭಾಧ್ಯಕ್ಷರಿಂದ ನಾಮನಿರ್ದೇಶಿತರಾಗಬೇಕಾದ ಕರ್ನಾಟಕ ವಿಧಾನ ಸಭೆಯ ನಾಲ್ವರು ಸದಸ್ಯರು. ಅವರ ಪೈಕಿ ಒಬ್ಬರು ಅನುಸೂಚಿತ ಜಾತಿಯವರಾಗಿರತಕ್ಕದ್ದು ಮತ್ತು ಒಬ್ಬರು ಅನುಸೂಚಿತ ಪಂಗಡದವರಾಗಿರತಕ್ಕದ್ದು ಮತ್ತು ಒಬ್ಬರು ಹಿಂದುಳಿದ ವರ್ಗಗಳಿಗೆ ಸೇರಿದವರಾಗಿರತಕ್ಕದ್ದು. .. ಸದಸ್ಯರು

(ii) ಸಭಾಪತಿಯವರಿಂದ ನಾಮನಿರ್ದೇಶಿತರಾಗಬೇಕಾದ ಕರ್ನಾಟಕ ವಿಧಾನ ಪರಿಷತ್ತಿನ ಇಬ್ಬರು ಸದಸ್ಯರು. .. ಸದಸ್ಯರು

(ಸಿ) ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು .. ಸದಸ್ಯರು

(ಡಿ) ಸರ್ಕಾರದ ಕಾರ್ಯದರ್ಶಿಯವರು, ಗೃಹ ಇಲಾಖೆ,
ಕರ್ನಾಟಕ ಸರ್ಕಾರ .. ಸದಸ್ಯರು

(ಇ) ಸರ್ಕಾರದ ಕಾರ್ಯದರ್ಶಿಯವರು, ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರ .. ಸದಸ್ಯ ಕಾರ್ಯದರ್ಶಿ

ಪರಂತು, ಭಾರತದ ಸಂವಿಧಾನದ 356ನೇ ಅನುಚ್ಛೇದದ ಅಡಿಯಲ್ಲಿ ಒಂದು ಉದ್ಘೋಷಣೆಯನ್ನು ಹೊರಡಿಸಿದ ಮೇಲೆ, ರಾಜ್ಯ ಸರ್ಕಾರವು ತಾನು ಉಚಿತವೆಂದು ಭಾವಿಸುವಮಟ್ಟಿಗೆ ಸಮಿತಿಯ ಅಂಗ ರಚನೆಯನ್ನು ವ್ಯತ್ಯಾಸಗೊಳಿಸಬಹುದು.

**9. ಸ್ಥಾಯಿ ಸಮಿತಿಯ ಪ್ರಕಾರ್ಯಗಳು.-** ಸ್ಥಾಯಿ ಸಮಿತಿಯು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು, ಎಂದರೆ:-

(ಎ) ಈ ಅಧಿನಿಯಮದ ಉಪಬಂಧಗಳು ಮತ್ತು ಅದರ ಅಡಿಯಲ್ಲಿ ರಚಿಸಲಾದ ನಿಯಮಗಳನ್ನು ಕಾರ್ಯಗತಗೊಳಿಸಿದುದರ ಬಗ್ಗೆ ಸಾಧ್ಯವಾದಮಟ್ಟಿಗೆ ವರ್ಷಕ್ಕೆ ಎರಡು ಬಾರಿ ಪರಿಶೀಲಿಸುವುದು;

(ಬಿ) ಅಂಥ ಕಾರ್ಯಗತಗೊಳಿಸುವಿಕೆಯಲ್ಲಿನ ತೊಂದರೆಗಳನ್ನು ನಿವಾರಿಸುವುದಕ್ಕೆ ಅಥವಾ ಅದನ್ನು ಸುಧಾರಿಸುವುದಕ್ಕೆ ಕ್ರಮಗಳನ್ನು ಸೂಚಿಸುವುದು; ಮತ್ತು

(ಸಿ) ರಾಜ್ಯ ಸರ್ಕಾರವು ಆಗಿಂದಾಗ್ಗೆ ಸಮಿತಿಗೆ ವಹಿಸುವ ಅಂಥ ಇತರ ಪ್ರಕಾರ್ಯಗಳು.

**10. ವಾರ್ಷಿಕ ವರದಿ.-** ರಾಜ್ಯ ಸರ್ಕಾರವು ಈ ಅಧಿನಿಯಮದ ಕಾರ್ಯ ಪ್ರವರ್ತನೆಯ ಬಗ್ಗೆ ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಅದನ್ನು ರಾಜ್ಯ ವಿಧಾನಮಂಡಲವು ಪ್ರತಿಯೊಂದು ಸದನದ ಮುಂದೆ ಒಂದು ಅಧಿವೇಶನ ಅಥವಾ ಎರಡು ಅಥವಾ ಹೆಚ್ಚಿನ ಅನುಕ್ರಮ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು 14 ದಿನಗಳ ಅವಧಿಯವರೆಗೆ ಅಧಿವೇಶನದಲ್ಲಿರುವಾಗ, ಮಂಡಿಸತಕ್ಕದ್ದು,

**11. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ.-** ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಲಾದ ಯಾವುದೇ ವಿಷಯಕ್ಕೆ ಆಗಲಿ ಯಾವೊಬ್ಬ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರ ಕಾನೂನು ವ್ಯವಹರಣೆಗಳು ಇರತಕ್ಕದ್ದಲ್ಲ.

**12. ತೊಂದರೆಗಳ ನಿವಾರಣೆ.-** ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ ರಾಜ್ಯ ಸರ್ಕಾರವು ಆ ತೊಂದರೆಯನ್ನು ನಿವಾರಿಸುವುದಕ್ಕಾಗಿ ತಾನು ಅಗತ್ಯವೆಂದು ಭಾವಿಸಬಹುದಾದ, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗದ ಅಂಥ ಕ್ರಮಗಳನ್ನು ಕೈಗೊಳ್ಳಬಹುದು ಅಥವಾ ಅಂಥ ಆದೇಶಗಳನ್ನು ಹೊರಡಿಸಬಹುದು.

**13. ನಿಯಮಗಳ ರಚನಾಧಿಕಾರ.-**(1) ರಾಜ್ಯ ಸರ್ಕಾರವು ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) (1)ನೇ ಉಪ-ಪ್ರಕರಣದ ಅಡಿಯಲ್ಲಿ ಅಂಥ ನಿಯಮಗಳನ್ನು ರಚಿಸುವವರೆಗೆ ಅಂಥ ಮೊಸಲಾತಿಯ ಸಂಬಂಧದಲ್ಲಿ ರಾಜ್ಯ ಸರ್ಕಾರವು ಮಾಡಿದ ಯಾವುದೇ ಅಮಲ್ಜಾರಿ ಆದೇಶವನ್ನು ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳೆಂದು ಭಾವಿಸತಕ್ಕದ್ದು.

[1][(3) ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಥವಾ ಎರಡು ಅಥವಾ. ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ನಿರಂತರ ಅಧಿವೇಶನದ ನಿಕಟ ತರುವಾಯದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮೊದಲು ಆ ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಬೇಕೆಂದು ಉಭಯ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸಕೂಡದೆಂದು ಉಭಯ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಡಾದ ರೂಪದಲ್ಲಿ ಮಾತ್ರವೇ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ, ಆದಾಗ್ಯೂ ಅಂಥ ಯಾವುದೇ ಮಾರ್ಪಾಡು ಅಥವಾ ರದ್ದತಿಯು, ಆ ನಿಯಮದ ಅಡಿಯಲ್ಲಿ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧೆಯುಂಟು ಮಾಡತಕದ್ದಲ್ಲ.][1]

1. 2004ರ ಅಧಿನಿಯಮ ಸಂಖ್ಯೆ: 7ರ ಮೂಲಕ ಸೇರಿಸಿ ಅಧಿನಿಯಮವನ್ನು ಅಧಿಸೂಚನೆಯ ಮುಖಾಂತರ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ತರಬೇಕಾಗಿದೆ. ಜಾರಿಗೆ ತಂದಿರುವ ಅಧಿಸೂಚನೆ ಲಭ್ಯವಾಗಿಲ್ಲ.

**ಅಧಿಸೂಚನೆ**

**I**

**ಬೆಂಗಳೂರು, ದಿನಾಂಕ 19ನೇ ಮೇ 1992 [ಸಂಖ್ಯೆ ಎಸ್‌ಡಬ್ಲ್ಯೂ ಎಲ್ 247 ಎಸ್‌ಎಡಿ 90, (ಭಾಗ-1)]**

ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿಗಳ ಮೀಸಲಾತಿ ಮುಂತಾದವು) ಅಧಿನಿಯಮ, 1990(1991ರ ಕರ್ನಾಟಕ ಅಧಿನಿಯಮ7) ರ1ನೇ ಪ್ರಕರಣದ (2)ನೇ ಉಪಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು, 1992ರ ಜೂನ್ ಮೊದಲನೇ ದಿನಾಂಕವು, ಸದರಿ ಅಧಿನಿಯಮವು ಜಾರಿಯಲ್ಲಿ ಬರುವ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಮುನಿಪೋತಲಯ್ಯ)

ಸರ್ಕಾರದ ಅಧೀನ ಕಾರ್ಯದರ್ಶಿ,

ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ.

(ಕರ್ನಾಟಕ ರಾಜ್ಯ ಪತ್ರದ ಭಾಗ 4 ಸೆಕ್ಷನ್ 2ಸಿ 2(ii) ವಿಶೇಷ ಪತ್ರಿಕೆ ಸಂಖ್ಯೆ 306 ದಿನಾಂಕ 21.5.1992ರಲ್ಲಿ ಪ್ರಕಟವಾಗಿದೆ.)

**II**

**ಬೆಂಗಳೂರು, ದಿನಾಂಕ 8ನೇ ಫೆಬ್ರವರಿ 2000 [ಸಂಖ್ಯೆ ಸಕಾಇ 132 ಎಸ್‌ಎಡಿ 97 (1)]**

ಕರ್ನಾಟಕ ಅನುಸೂಚಿತ ಜಾತಿಗಳು, ಅನುಸೂಚಿತ ಬುಡಕಟ್ಟುಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ) (ತಿದ್ದುಪಡಿ) ಅಧಿನಿಯಮ, 1997 (1997ರ ಕರ್ನಾಟಕ ಅಧಿನಿಯಮ 27) ಇದರ ಪ್ರಕರಣ 1ರ ಉಪಪ್ರಕರಣ 2ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು, ಈ ಮೂಲಕ 2000 ಇಸವಿಯ ಫೆಬ್ರವರಿ ತಿಂಗಳ 8ನೇ ದಿನಾಂಕದಂದು ಸದರಿ ಅಧಿನಿಯಮದ ಎಲ್ಲಾ ಉಪಬಂಧಗಳು ಜಾರಿಗೆ ಬರುವ ದಿನಾಂಕವೆಂದು ಗೊತ್ತುಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ
ಹೆಸರಿನಲ್ಲಿ,

(ಇ. ಕೃಷ್ಣಮೂರ್ತಿ)
ಕರ್ನಾಟಕ ಸರ್ಕಾರದ ಉಪ-ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ.

(ಕರ್ನಾಟಕ ರಾಜ್ಯ ಪತ್ರದ ಭಾಗ 4 ಸೆಕ್ಷನ್ 1ಸಿ ವಿಶೇಷ ಪತ್ರಿಕೆ ಸಂಖ್ಯೆ 290 ದಿನಾಂಕ 8.2.2000ರಲ್ಲಿ ಪ್ರಕಟವಾಗಿದೆ.)

III

**ಅಧಿಸೂಚನೆ**

**ಸಂಖ್ಯೆ: ಸಕಇ 49 ಬಿಸಿಎ 2012, ಬೆಂಗಳೂರು, ದಿನಾಂಕ: 22ನೇ ಜೂನ್ 2012.**

ಕರ್ನಾಟಕ ಅನುಸೂಚಿತ ಜಾತಿಗಳು ಅನುಸೂಚಿತ ಬುಡಕಟ್ಟುಗಳು ಮತ್ತು ಇತರೆ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವಗಳ ಮೀಸಲಾತಿ) (ತಿದ್ದುಪಡಿ) ಅಧಿನಿಯಮ 2011 (2012ರ ಕರ್ನಾಟಕ ಅಧಿನಿಯಮ ಸಂಖ್ಯೆ: 7)ರ 1ನೇ ಪ್ರಕರಣದ (2)ನೇ ಉಪ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ರಾಜ್ಯ ಸರ್ಕಾರವು ದಿನಾಂಕ: 22.06.2012ನ್ನು ಸದರಿ ಉಪಬಂಧಗಳು ಜಾರಿಗೆ ಬರುವ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಎಂ. ಎಂ. ಬಾಟೆ,)
ಕರ್ನಾಟಕ ಸರ್ಕಾರದ ಅಧೀನ ಕಾರ್ಯದರ್ಶಿ-3,
ಸಮಾಜ ಕಲ್ಯಾಣ ಇಲಾಖೆ.